MOTION TO ELECT MEMBERS TO THE SENATE OF THE MYSORE UNIVERSITY

Sri K. V. SHANKARA GOWDA (Minister for Education and Agriculture).—I move:

"That this Council do proceed to elect two members to the Senate of the Mysore University according to the principle of proportional representation by means of the single transferable vote as required under section 15 of the Mysore University Act, 1956."

Mr. CHAIRMAN.—I will put it to vote. The question is:

"That this Council do proceed to elect two members to the Senate of the Mysore University according to the principle of proportional representation by means of the single transferable vote as required under section 15 of the Mysore University Act, 1956."

The motion is adopted.

The calendar of events for the election is being circulated separately.

MOTION OF THANKS TO THE GOVERNOR'S ADDRESS

(Debate Continued)

†ಶ್ರೀ ಕೆ. ಲಕ್ಕಪ್ಪ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಮಾನ್ಯ ಸಭಾಪತಿಯವರೇ, ರಾಜ್ಯಪಾಲರವರು ಮೊದಲನೆಯ ಬಾರಿಗೆ ತಮ್ಮ ಭಾಷಣವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ಭಾಷಣದಲ್ಲಿ ಅವರು ದೇಶದಲ್ಲಿ ಉಂಟಾಗಿರತಕ್ಕಂತಹ ಅಶಾಂತಿಯ ವಾತಾವರಣವನ್ನು ಪ್ರಾರಂಭಿಸಿ, ಅಂತ್ಯದಲ್ಲಿ ಬಹಳ ಪ್ರಮುಖವಾದಂತಹ ಗಡಿ ಪ್ರಶ್ನೆಯನ್ನೂ ಸಹ ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರಾರಂಭದಲ್ಲಿ ಬಹಳ ಕಳಕಳಿಯಿಂದ ನೊಂದ ಮನಸ್ಸಿನಿಂದ ತಮ್ಮ ಭಾಷಣವನ್ನು ಮಾಡಿದ್ದಾರೆ, ಕಾರಣವಾದರೂ ದೇಶದಲ್ಲಿ ಎಲ್ಲಾ ಮೂಲೆಯಲ್ಲೂ ಸಹ ಅಶಾಂತಿಗಳು, ಬಂದ್‌ಗಳು, ಚಳವಳಿಗಳು, ಇತ್ಯಾದಿ ವಾತಾವರಣಗಳಿಂದ ತುಂಬಿ ದೇಶದಲ್ಲಿ ಅನೇಕ ಹಿಂಸಾತ್ಮಕ ಪ್ರದರ್ಶನಗಳು, ವಿಧ್ವಂಸಕಾರಿ ಕೃತ್ಯಗಳು ನಡೆಯುವುದಕ್ಕೆ ಎಡೆಕೊಟ್ಟಿರತಕ್ಕದ್ದು ಎಲ್ಲರ ಮನಸ್ಸಿಗೂ ಸಹ ವೇದನೆ ಉಂಟುಮಾಡತಕ್ಕ ವಿಚಾರವಾಗಿದೆ. ಕಳೆದ ಮಹಾ ಚುನಾವಣೆ ಪ್ರಾರಂಭವಾಗುವುದಕ್ಕೆ ಕೆಲವು ತಿಂಗಳುಗಳ ಮುಂಚಿನಿಂದ ಇಂತಹ ಚಟುವಟಿಕೆಗಳು ಈ ದೇಶದಲ್ಲಿ ಹೆಚ್ಚಾಗಿ ಕಾಣುತ್ತಿದೆ. ಇದಕ್ಕೆ ನನಗನಿಸುವುದು ಬಹುಮಟ್ಟಿಗೆ ರಾಜಕೀಯ ಪಕ್ಷಗಳೂ ಸಹ ಕಾರಣವಾಗಿದೆ ಎಂದು ಹೇಳದೆ ವಿಧಿಯಿಲ್ಲ. ಈ ದೇಶದಲ್ಲಿ ಎಲ್ಲಿಯವರೆಗೆ ಶಾಂತಿ, ನೆಮ್ಮದಿ ಇರುವುದಿಲ್ಲವೋ ಅಲ್ಲಿಯವರೆಗೆ ಹೆಚ್ಚಿನ ಪ್ರಗತಿ ಸಾಧನೆ ಮಾಡುವುದಕ್ಕೆ ಅಪಕಾಶವಿಲ್ಲ ಎನ್ನುವುದನ್ನು ನಾವೆಲ್ಲರೂ ಮನಗಂಡಿದ್ದರೂ ಸಹ ತಮ್ಮ ರಾಜಕೀಯ ಗುರಿಗಳನ್ನು ಸಾಧನೆ ಮಾಡುವ ಉದ್ದೇಶದಿಂದ ತಮ್ಮ ಗುರಿಯನ್ನು ಸಾಧಿಸುವ ದೃಷ್ಟಿಯಿಂದ ಅನೇಕ ರಾಜಕೀಯ ಪಕ್ಷಗಳು ಇಂತಹ ಗೊಂದಲಗಳನ್ನು ಎಬ್ಬಿಸುವುದಕ್ಕೆ ಕಾರಣವಾಗಿವೆ ಎಂದು ಹೇಳಿದರೆ ಅದು ತಪ್ಪಾಗಲಾರದು ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ದೇಶದಲ್ಲಿರುವ ಅನೇಕ ರಾಜಕೀಯ ಪಕ್ಷಗಳು ಎಳೆಯ ಮನಸ್ಸಿನ, ಎಂದರೆ, ಯಾವ ಕಡೆಗೆ ಎಳೆದು

†Indicate that the remarks or speeches have not been revised by the member concerned

(ಶ್ರೀ ಕೆ. ಲಕ್ಕಪ್ಪ)

ಕೊಂಡರೂ ಅತ್ತ ಕಡೆ ಮನಸ್ಸನ್ನು ಹರಿಸುವ ವಿದ್ಯಾರ್ಥಿಗಳನ್ನು ಇದಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ ಎಂದು ನನಗನಿಸುತ್ತದೆ. ನಮಗೆಲ್ಲರಿಗೂ ಗೊತ್ತಿರುವ ಮಟ್ಟಿಗೆ ಅನೇಕ ಜನ ವಿದ್ಯಾರ್ಥಿಗಳು ಒಂದು ರೀತಿಯಾಗಿ ನಿಯಮ ಮತ್ತು ಒಗ್ಗಟ್ಟು ಹಾಗೂ ಶಿಸ್ತಿನಿಂದ ನಡೆದುಕೊಂಡಿದ್ದಾರೆ. ಆದರೆ ಇಂತಹ ಚಳುವಳಿ ನಡೆಯತಕ್ಕ ಕಾಲದಲ್ಲಿ ಅನೇಕ ಇತರೇ ಜನಗಳು ಬಂದು ಸೇರಿಕೊಂಡು ಇಂತಹ ಆಂದೋಲನಗಳನ್ನು 'ಬೆಂದ ಮನೆಗೆ ಹಿರಿದದ್ದೇ ರಾಫ' ಎನ್ನುವ ಗಾದೆಯಂತೆ ಇಂತಹ ಸಂದರ್ಭಗಳಲ್ಲಿ ಲೂಟಿ ಮಾಡುವುದರ ಮೂಲಕ ಆಸ್ತಿಪಾಸ್ತಿಗಳನ್ನು ನಾಶ ಮಾಡುವುದರ ಮೂಲಕ ತಮ್ಮ ಗುರಿಯನ್ನು ಸಾಧನೆ ಮಾಡಿಕೊಳ್ಳಬೇಕು ಎನ್ನುವ ಮನೋಭಾವ ಉಳ್ಳ ಜನರು ಅನೇಕರು ಇರುತ್ತಾರೆ. ಈಗ ಜನಗಳು ಇಂತಹ ವಿದ್ಯಾರ್ಥಿಗಳ ಜೊತೆಯಲ್ಲಿ ಸೇರಿಕೊಂಡು ಆಂದೋಲನದ ಪ್ರಯತ್ನವನ್ನು ನಡೆಸುತ್ತಿದ್ದಾರೆ ಎನ್ನುವುದು ನಮಗೆಲ್ಲರಿಗೂ ಗೊತ್ತಿರುವ ವಿಚಾರ. ಇಂತಹ ದಳುವಳಿಗಳು, ಬಂದ್‌ಗಳು, ಸ್ಟ್ರೈಕ್‌ಗಳು ನಡೆದಾಗ ಇತ್ತೀಚೆನ ಸಂದರ್ಭಗಳಲ್ಲಿ ಸಾರ್ವಜನಿಕರ ಹಾಗೂ ಸರಕಾರದ ಆಸ್ತಿಪಾಸ್ತಿಗಳನ್ನು ನಾಶಮಾಡತಕ್ಕ ಒಂದು ರೀತಿಯಾದ ಕೆಲಸಗಳನ್ನು ನಹ ನಾವು ನೋಡಿದ್ದೇವೆ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಸಾರ್ವಜನಿಕರ ಆಸ್ತಿಯನ್ನು ನಾಶಮಾಡುವುದರ ಮೂಲಕ ಈ ದೇಶದ ಆಸ್ತಿಯನ್ನು ಹಾಳು ಮಾಡುತ್ತಿದ್ದಾರೆ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಇಂತಹ ವಿಷಯಗಳು ಈ ದೇಶದಲ್ಲಿರಬಾರದು ಎಂದು ಯಾವ ರಾಜಕೀಯ ಪಕ್ಷಗಳೇ ಆಗಲೀ ಅದನ್ನು ಅರಿಯದೇ ಹೋದರೆ ಶಾಂತಿ ಹಾಗೂ ನೆಮ್ಮದಿಯಿಂದ ಈ ದೇಶದಲ್ಲಿ ಇರಲು ಸಾಧ್ಯವಾಗುವುದಿಲ್ಲ. ದೇಶದ ಅಭಿವೃದ್ಧಿ ಕೆಲಸಗಳು ಆಗದೇ ಹೋದರೆ ಅದರಿಂದ ದೇಶಕ್ಕೆ ಬಹಳ ಅನರ್ಥಗಳಾಗುತ್ತವೆ ಮತ್ತು ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ ಮತ್ತು ಇದರಿಂದ ದೇಶದ ಜನಗಳ ಅಭಿವೃದ್ಧಿಗೆ ಬಹಳ ಕಷ್ಟವಾಗುತ್ತದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿರುವ ವಿಚಾರ. ಇದನ್ನು ಜನತೆಯೂ ಮನಗಾಣಬೇಕು ವಿದ್ಯಾರ್ಥಿಗಳೂ ಸಹ ಮನಗಾಣಬೇಕು ಹಾಗು ಜವಾಬುದಾರಿಯುಳ್ಳ ಎಲ್ಲ ಸಾರ್ವಜನಿಕರೂ ಮನಗಾಣಬೇಕು. ಮತ್ತು ಇವರೆಲ್ಲರೂ ಇದರ ಕಡೆ ಗಮನಹರಿಸಬೇಕಾದ ಪ್ರಮೇಯವಿದೆ. ಈ ರೀತಿ ತಪ್ಪುದಾರಿಯಲ್ಲಿ ಹೋಗುತ್ತಿರುವವರನ್ನು ಸರಿಯಾದ ರೀತಿಯಲ್ಲಿ ಹೋಗುವುದಕ್ಕೆ ತಕ್ಕಂತಹ ವಾತಾವರಣವನ್ನುಂಟುಮಾಡಿ ದೇಶದ ಪ್ರಗತಿ ಕುಂಠಿತವಾಗದಂತೆ ದೇಶದ ಪ್ರಗತಿಯನ್ನು ಸಾಧಿಸುವುದರ ಕಡೆಗೆ ವಿದ್ಯಾರ್ಥಿಗಳ ತಂದೆ ತಾಯಿಗಳು, ಜವಾಬ್ದಾರಿಯುಳ್ಳ ಎಲ್ಲ ಸಾರ್ವಜನಿಕರು ತಮ್ಮ ಗಮನವನ್ನು ಹರಿಸಿ ಇದನ್ನು ತಡೆಗಟ್ಟುವುದು ಅಗತ್ಯ. ಇದನ್ನು ಸಾಧಿಸುವುದಕ್ಕೆ ತಕ್ಕ ಮಾರ್ಗವನ್ನು ಹುಡುಕಿ ಹೋಗುವುದರಲ್ಲಿ ಜವಾಬುದಾರಿಯುಳ್ಳ ಈ ಶಾಸನ ಸಭೆಯ ಎಲ್ಲ ಸದಸ್ಯರುಗಳೂ ಇದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ದೇಶದಲ್ಲಿ ಎದ್ದಿರುವ ಈ ಅಶಾಂತಿಯನ್ನು ನಿರಿಪಡಿಸಿ ದೇಶದಲ್ಲಿ ಶಾಂತಿ ಹಾಗೂ ನೆಮ್ಮದಿಗಳು ನೆಲಸುವುದಕ್ಕೆ ತಕ್ಕ ಕಾರ್ಯಗಳನ್ನು ಮಾಡಲು ಇನ್ನೂ ಹೆಚ್ಚಿನ ಪ್ರಯತ್ನಗಳನ್ನು ಸಾಧಿಸಬೇಕು ಎಂದು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲು ಇಷ್ಟಪಡುತ್ತೇನೆ.

ಇನ್ನು ಈ ದೇಶದ ಮುಂದೆ ಬಹು ಪ್ರಮುಖವಾದ ಕೆಲವು ಪ್ರಸಂಗಗಳು ಇವೆ. ಇಂತಹುದರಲ್ಲಿ ಬಹು ಮುಖ್ಯವಾದುದು ಎಂದರೆ, ವ್ಯವಸಾಯ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಈ ವಿಚಾರದಲ್ಲಿ ಈ ದೇಶದ ಈಗಿನ ಸನ್ನಿವೇಶದಲ್ಲಿ ಹೆಚ್ಚು ಆಹಾರವನ್ನು ನಾವು ಉತ್ಪಾದನೆ ಮಾಡಿಕೊಳ್ಳದೇ ಹೋದರೆ ಇದರಿಂದ ನಮ್ಮ ದೇಶದ ಆರ್ಥಿಕ ಸ್ಥಿತಿ ಅಸ್ತವ್ಯಸ್ತವಾಗುತ್ತದೆ. ಈ ದೇಶದಲ್ಲಿ ಆಂದೋಲನಕ್ಕೆ ಎಡೆಕೊಡುವುದಕ್ಕೆ ಅವಕಾಶವಾಗುತ್ತದೆ. ಇದರ ಬಗ್ಗೆ ಸರಕಾರ ಹಾಗೂ ಜನತೆ ಮನಗಂಡು ಸ್ವಲ್ಪ ಹೆಚ್ಚಿನ ಗಮನ ಕೊಡುತ್ತಿದ್ದಾರೆ ಎಂದು ಇತ್ತೀಚೆಗೆ ನಮಗೆ ಅನಿಸುತ್ತಿದೆ. ಆದರೆ ಸರಕಾರ ಯಾವ ವೇಗದಲ್ಲಿ ಈ ಕ್ಷೇತ್ರದಲ್ಲಿ ತಮ್ಮ ಗಮನವನ್ನು ಹರಿಸಬೇಕಾಗಿತ್ತೋ ಯಾವ ರೀತಿಯಿಂದ ಹೆಚ್ಚಿನ ಉತ್ಸಾಹದಿಂದ ಇರಬೇಕಿತ್ತೊ ಆ ರೀತಿಯಾಗಿ ಕೆಲಸ ಮಾಡದೇ ಇರುವುದರಿಂದ ನಾವು ನಿರೀಕ್ಷಿಸಿದಷ್ಟು ಫಲ ದೊರಕಲಿಲ್ಲ. ಮತ್ತು ಇದರಲ್ಲಿ ಯಾವ ರೀತಿಯಾದ ಕೆಲಸಗಳನ್ನು ಮಾಡಬೇಕೋ ಅದರಂತೆ ಮಾಡಲು ಆಗಲಿಲ್ಲ. ಇಂತಹ ಪರಿಸ್ಥಿತಿ ಇಂದು ದೇಶದಲ್ಲಿ ಬಂದಿದೆ ಎಂದು ನನಗನಿಸುತ್ತಿದೆ. ಇದರ ಕಡೆಗೆ ಸರಕಾರ ಒಂದು ರೀತಿಯಾದ ನಿಧಾನವಾಗಿ ಕೆಲಸ ಮಾಡುವುದರಿಂದಾಗಿ ಇದರಿಂದ ನಿರೀಕ್ಷಿಸಿದಷ್ಟು ಫಲ ಜನತೆಗೆ ದೊರಕಲಿಲ್ಲ. ಇದೂ ಅಲ್ಲದೆ ಈ ದೇಶದಲ್ಲಿ ಕಳೆದ ಎರಡು ಮೂರು ವರ್ಷಗಳಿಂದಲೂ ಕ್ಷಾಮ ಪರಿಸ್ಥಿತಿ ಒದಗಿ ಇನ್ನೂ ಹೆಚ್ಚಿನ ತೊಂದರೆಯುಂಟಾಗುವುದಕ್ಕೆ ಅವಕಾಶವಾಯಿತು ಎನ್ನುವುದು ನಮಗೆಲ್ಲರಿಗೂ ಗೊತ್ತಾಗಿದೆ. ನಮ್ಮ ಇಂಡಿಯಾದೇಶದಲ್ಲಿ ಪ್ರಜಾ ಸಂಖ್ಯೆ ಯಾವ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ ಎನ್ನುವುದು ನಮಗೆಲ್ಲರಿಗೂ ಗೊತ್ತೇ ಇದೆ. ಇದರ ಅಂಕ ಅಂಶಗಳನ್ನು ಶೇಖರಣೆ ಮಾಡುವ ತಜ್ಞರು ಕೂಡ ಇದನ್ನು ಹೇಳಿ

ರುತ್ತಾರೆ. ನಮ್ಮ ದೇಶದಲ್ಲಿ ಜನಸಂಖ್ಯೆ ಈಗ ಬೆಳೆಯುತ್ತಿರತಕ್ಕ ಪ್ರಮಾಣದಲ್ಲಿ ಇದೇ ರೀತಿ ಮುಂದುವರಿದ ಪಕ್ಷದಲ್ಲಿ 1985ನೇ ಇಸವಿಯ ಹೊತ್ತಿಗೆ ನಮ್ಮ ದೇಶದ ಜನಸಂಖ್ಯೆ ಸುಮಾರು 85 ಕೋಟಿಯವರೆಗೂ ಆಗುತ್ತದೆ ಎನ್ನುವುದನ್ನು ರೆಕ್ಕ ಹಾಕಿ ಈ ತಜ್ಞರು ಹೇಳಿದ್ದಾರೆ. ಕೇವಲ ಇನ್ನು ಇಪ್ಪತ್ತು ಮೂರು ವರ್ಷಗಳ ಅವಧಿಯಲ್ಲಿ ಒಂದಕ್ಕೆರಡರಷ್ಟು ಪ್ರಜಾ ಸಂಖ್ಯೆ ಆಗತಕ್ಕ ಪರಿಸ್ಥಿತಿ ಇರುವಾಗ ಇದನ್ನು ಗಮನದಲ್ಲಿಟ್ಟುಕೊಂಡು ಈ ದೇಶದಲ್ಲಿ ಇನ್ನೂ ಹೆಚ್ಚು ಹೆಚ್ಚು ಉತ್ಪಾದನೆಯನ್ನು ಮಾಡುವುದರ ಕಡೆಗೆ ಹೆಚ್ಚು ಗಮನವನ್ನು ಹರಿಸಿ ಇದಕ್ಕೆ ತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡುವುದರ ಕಡೆಗೆ ಹೋಗಬೇಕು. ಇಲ್ಲದೇ ಹೋದ ಪಕ್ಷದಲ್ಲಿ ಈ ದೇಶದಲ್ಲಿ ಮುಂದೆ ಬಹಳ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಇದರಿಂದ ದೇಶಕ್ಕೆ ಬಹಳ ಅಪಾಯಕಾರಿಯಾದ ಸನ್ನಿವೇಶವಿದೆ. ಇದನ್ನು ಸರಕಾರ ಬೇಗನೆ ಮನಗಂಡು ಇನ್ನೂ ಹೆಚ್ಚಿನ ಪ್ರಯತ್ನವನ್ನು ಇದರ ಕಡೆಗೆ ಹರಿಸಬೇಕು. ಇದರ ಬಗೆಗೆ ಸರಕಾರ ತಿಳಿದುಕೊಂಡು ಸ್ವಲ್ಪ ಒಗ್ಗಟ್ಟಿನಿಂದ ಇದನ್ನು ತಡೆಗಟ್ಟದೇ ಇದ್ದ ಪಕ್ಷದಲ್ಲಿ ಈಗ ಇರತಕ್ಕ ಕಷ್ಟ ಪರಿಸ್ಥಿತಿಯನ್ನು ತಪ್ಪಿಸುವುದಕ್ಕೆ ಅವಕಾಶವಾಗುವುದಿಲ್ಲ. ಮತ್ತು ನಮ್ಮ ಸರಕಾರದವರು ಮೊದಲನೇ ಹಾಗೂ ಎರಡನೇ ಯೋಜನೆಗಳಿಂದು ಮಾಡಿ ಅದರ ಮೂಲಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿದರು. ಇದರ ಮೂಲಕ ದೇಶದಲ್ಲಿ ಆಹಾರದ ಅಭಾವವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ಅವಕಾಶವಾದರೂ ಇದರಿಂದ ನಿರೀಕ್ಷಿಸಿದಷ್ಟು ಫಲ ಇನ್ನೂ ದೊರಕಲಿಲ್ಲ. ಮತ್ತು ಇದರಿಂದ ಹೆಚ್ಚು ಪ್ರಯೋಜನಗಳನ್ನೂ ಸರಕಾರ ಪಡೆಯಲು ಆಗಲಿಲ್ಲ. ಈ ಕಾರಣ ಇಂದು ಸುಮಾರು 500 ಕೋಟಿಗಿಂತಲೂ ಹೆಚ್ಚು ಬೆಲೆಯ ಆಹಾರ ಪದಾರ್ಥಗಳನ್ನು ಪರದೇಶಗಳಿಂದ ತರಿಸಿ ದೇಶದ ಆಹಾರದ ಅಭಾವದ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ಎದಿರಿನತಕ್ಕ ಪರಿಸ್ಥಿತಿ ನಮಗೆ ಬಂದು ಒದಗಿದೆ. ಹೆಚ್ಚು ಆಹಾರಬೆಳೆಯತಕ್ಕ ಅಮೆರಿಕಾ ದೇಶ ನಮ್ಮ ದೇಶಕ್ಕೆ ನೆರವಾಗಿ ನಿಂತು ಆಹಾರವನ್ನು ಒದಗಿಸದೇ ಇದ್ದಿದ್ದರೆ ನಮಗೆ ಬಹಳ ಕಷ್ಟ ಆಗುತ್ತಿತ್ತು. ಆದರೆ ಅವರ ಸಹಾಯದಿಂದ ನಾವು ಎಲ್ಲ ಕಷ್ಟಗಳನ್ನೂ ನಿಭಾಯಿಸಿಕೊಂಡು ಹೋಗುವ ಸ್ಥಿತಿಯಲ್ಲಿದ್ದೇವೆ ಮತ್ತು ನಮ್ಮ ದೇಶದಲ್ಲಿ ಇನ್ನೂ ಹೆಚ್ಚು ಆಹಾರ ಬೆಳೆಯುವ ಪರಿಸ್ಥಿತಿಯಲ್ಲಿ ನಮ್ಮ ಯೋಜನೆಗಳೂ ಇನ್ನೂ ಆಗಿಲ್ಲ. ಆದುದರಿಂದ ಸರಕಾರ ಇನ್ನು ಮುಂದಾದರೂ ನಮ್ಮ ದೇಶದಲ್ಲಿ ಆಹಾರದ ಅಭಾವ ಪರಿಸ್ಥಿತಿಯನ್ನು ತಪ್ಪಿಸಲು ಅನುಕೂಲವಾಗುವಂತಹ ರೀತಿಯಲ್ಲಿ ರೈತರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಹಣವನ್ನೂ ಕೊಟ್ಟು ಆಹಾರದವನಗಳನ್ನು ಹೆಚ್ಚು ಬೆಳೆಯುವುದಕ್ಕೆ ಸರಕಾರ ಶೀಘ್ರ ಪ್ರಯತ್ನ ನಡೆಸಬೇಕು ಎಂದು ಸರಕಾರದಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ.

ಈ ವಿಚಾರದಲ್ಲಿ ಸರ್ಕಾರದ ಜವಾಬ್ದಾರಿ ಬಹಳ ಹೆಚ್ಚಿನ ರೀತಿಯಲ್ಲಿದೆ. ಕೆಲವು ಇರಾಖೆಗಳಾದಂತಹ ವ್ಯವಸಾಯ, ಲೋಕೋಪಯೋಗಿ, ಕೈಗಾರಿಕೆ, ವಿದ್ಯಾಭ್ಯಾಸ ಮತ್ತು ಗೃಹ ಇರಾಖೆಗಳು ಏನಿವೆ ಇವುಗಳು ಬಹಳ ಮುಖ್ಯವಾದವುಗಳು. ಈ ಖಾತೆಗಳ ಕೆಲಸಗಳು ಬಹಳ ತ್ವರಿತವಾಗಿ ನಡೆಯದೆ ಹೋದರೆ ದೇಶದ ಆರ್ಥಿಕ ಸ್ಥಿತಿ ಕುಂಠಿತವಾಗುತ್ತದೆ. ಇಂತಹ ಪ್ರಮುಖವಾದ ಇರಾಖೆಗಳಿಗೆ ಪ್ರತಿಯೊಂದು ಇರಾಖೆಗೂ ಒಬ್ಬೊಬ್ಬ ಮಂತ್ರಿಗಳು ಇರಬೇಕು. ಈ ಖಾತೆಗಳಲ್ಲಿ ಕೆಲಸ ಮಾಡತಕ್ಕಂಥ ಮಂತ್ರಿಗಳು ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಮತ್ತು ಹೆಚ್ಚಿನ ಕೆಲಸಗಳೂ ಸಹ ಇರುತ್ತವೆ. ಸಂಬಂಧಪಟ್ಟ ಮಂತ್ರಿಗಳು ಈ ಇರಾಖೆಗಳಲ್ಲಿ ಹೆಚ್ಚಿನ ಕಾಲವನ್ನು ವಿನಿಯೋಗಿಸದಿದ್ದರೆ, ಹೆಚ್ಚಿನ ಶ್ರದ್ಧೆಯನ್ನು ವಿನಿಯೋಗಿಸದಿದ್ದರೆ ಕೆಲಸಗಳನ್ನು ತ್ವರಿತವಾಗಿ ಮಾಡಿಕೊಂಡು ಹೋಗುವುದಕ್ಕಾಗುವುದಿಲ್ಲ. ಆದ್ದರಿಂದ ಒಂದೊಂದು ಇರಾಖೆಗೆ ಒಬ್ಬೊಬ್ಬ ಮಂತ್ರಿಗಳನ್ನು ನೇಮಕ ಮಾಡಬೇಕೆಂದು ನಿವೇದನೆ ಮಾಡಿಕೊಳ್ಳುತ್ತೇನೆ. ಮೊದಲು ನಮ್ಮ ಮುಖ್ಯಮಂತ್ರಿಗಳು ಕೈಗಾರಿಕೆ ಮತ್ತು ವ್ಯವಸಾಯ ಇವೆರಡನ್ನೂ ಸಹ ವಹಿಸಿಕೊಂಡಿದ್ದರು. ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದರು. ಮುಖ್ಯಮಂತ್ರಿಗಳು ಇವತ್ತಿನ ದಿವನ ಬಹಳ ಪ್ರಾಮುಖ್ಯವಾದಂತಹ ಸ್ಥಾನದಲ್ಲಿ ಇದ್ದಾರೆ. ಕೇಂದ್ರದಲ್ಲಿ ಪ್ರಭಾವಶಾಲಿಯಾದಂಥಹ ವ್ಯಕ್ತಿ, ಇವತ್ತು ಈ ಖಾತೆಗಳನ್ನು ಬದಲಾವಣೆ ಮಾಡುವುದಕ್ಕೆ ಹೊರಟಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ದೂರದೃಷ್ಟಿ ಉಳ್ಳವರು, ಬಹಳ ವಿವೇಚನೆಯಿಂದ ಕೆಲಸ ಮಾಡತಕ್ಕಂಥ ಶಕ್ತಿ ಅವರಲ್ಲಿದೆ. ಇವತ್ತಿನ ದಿವನ ಒಬ್ಬೊಬ್ಬ ಮಂತ್ರಿಗಳಿಗೆ ಎರಡು ಮೂರು ಖಾತೆಗಳ ಜವಾಬ್ದಾರಿಯನ್ನು ಹೊರಿಸಿದ್ದಾರೆ. ಇದು ತಾತ್ಕಾಲಿಕವಾದಂತಹ ವ್ಯವಸ್ಥೆಯೆಂದು ನಾನು ತಿಳಿದಿದ್ದೇನೆ. ಏಕೆಂದರೆ, ಒಬ್ಬರೇ ಮಂತ್ರಿಗಳಿಗೆ ಹೆಚ್ಚಿನ ಖಾತೆಗಳನ್ನು ಹೊರಿಸಿ ಅವರಿಂದ ಹೆಚ್ಚಿನ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ದೇಶದಲ್ಲಿ ಇವತ್ತಿನ ದಿವನ ಕೆಲಸಗಳು ವೇಗವಾಗಿ ಮತ್ತು ತ್ವರಿತವಾಗಿ ನಡೆಯಬೇಕಾದರೆ, ಸಾಧನೆಯಾಗಬೇಕಾದರೆ ಒಬ್ಬೊಬ್ಬ ಮಂತ್ರಿಗಳ ಸ್ವಾಧೀನದಲ್ಲಿ ಒಂದೊಂದು ಖಾತೆ ಇರುವುದು ಒಳ್ಳೆಯದು, ಅವಶ್ಯಕ ಮತ್ತು ಅನಿವಾರ್ಯ ಎಂಬುದನ್ನು ನಾನು ಒತ್ತಿ ಹೇಳುತ್ತೇನೆ.

(ಶ್ರೀ ಕೆ. ಲಕ್ಕಪ್ಪ)

ಇವತ್ತಿನದಿವಸ ನಮ್ಮ ದೇಶದಲ್ಲಿ ಆಹಾರವನ್ನು ಹೆಚ್ಚು ಹೆಚ್ಚು ಬೆಳೆದು ಈಗಿರುವಂತಹ ಕೊರತೆಯನ್ನು ನಿವಾರಣೆ ಮಾಡಬೇಕಾದುದು ಬಹಳ ಪ್ರಾಮುಖ್ಯವಾದ ಕೆಲಸ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅದು ನಿವಾರಣೆಯಾಗಬೇಕಾದರೆ ಈಗ ನಾವು ಬೆಳೆಯುತ್ತಿರುವುದಕ್ಕಿಂತ ಎರಡರಿಂದ ನಾಲ್ಕು ಪಟ್ಟು ಹೆಚ್ಚು ಬೆಳೆಯಬೇಕಾಗಿದೆ ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ. ಈ ದೃಷ್ಟಿಯಿಂದ ಇತ್ತೀಚೆಗೆ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವ ಬಗ್ಗೆ ಕೆಲವು ಪ್ರಯತ್ನಗಳು ನಡೆದಿವೆ. ಹೈಬ್ರಿಡ್ ಜೋಳ, ಹೈಬ್ರಿಡ್ ಜವಾರ್ ಮತ್ತು ಹೆಚ್ಚು ಫಸಲು ಕೊಡುವಂತಹ ಬತ್ತದ ಬೀಜಗಳನ್ನು ಉಪಯೋಗಿಸಲಾಗುತ್ತಿದೆ. ಹೊಸ ಹೊಸ ಪ್ರಯೋಗಗಳನ್ನು ನಡೆಸಿ ಅದನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ಆದರೆ ಈಗ ನಡೆದಿರತಕ್ಕಂಥ ಪ್ರಯತ್ನಗಳು, ಪ್ರಯೋಗಗಳು ಮತ್ತು ಪ್ರಚಾರಗಳು ಸಾಲದು ಎಂದು ನಾನು ಒತ್ತಿ ಹೇಳಬೇಕಾಗಿದೆ. ಈಗ ನಾವು ಯಾವ ವೇಗದಲ್ಲಿ ಹೋಗುತ್ತಿದ್ದೇವೆಯೋ, ಅದೇ ವೇಗದಲ್ಲಿ ಹೋದರೆ ಮುಂದೆ ನಾವು ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ಮನಗಂಡು ಇನ್ನೂ ಹೆಚ್ಚಿನ ಪ್ರಯೋಗಗಳನ್ನು ನಡೆಸಬೇಕಾಗಿದೆ. ಆಹಾರ ಸಂಶೋಧನೆಗಳ ಕೇಂದ್ರಗಳು ಹೆಚ್ಚಾಗಬೇಕಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ಕಡೆ ಹೆಚ್ಚು ಆಹಾರ ಬೆಳೆಯುವುದಕ್ಕಾಗಿ ತರುಣ ರೈತರು ಮುಂದೆ ಬಂದಿದ್ದಾರೆ. ಮತ್ತು ಈಗಾಗಲೇ ಕೆಲವು ಕಡೆಗಳಲ್ಲಿ ವಿದ್ಯಾವಂತ ರೈತ ತರುಣರು ಬೆಳೆಯುತ್ತಿದ್ದಾರೆ. ಆದರೆ ಅಧುನಿಕ ಪದ್ಧತಿಯಲ್ಲಿ ಬಹುತೇಕ ರೈತರು ಇನ್ನೂ ಸರಿಯಾಗಿ ತಿಳಿದುಕೊಂಡಿಲ್ಲ. ಈ ದೃಷ್ಟಿಯಿಂದ ನಾವು ಹೆಚ್ಚಿನ ಪ್ರಚಾರ ಕಾರ್ಯಗಳನ್ನು ನಡೆಸಬೇಕಾಗಿದೆ. ಒಳ್ಳೆಯ ಗೊಬ್ಬರವನ್ನು ಉಪಯೋಗಿಸಿ ಹೆಚ್ಚು ಆಹಾರ ಬೆಳೆಯಬೇಕೆಂಬ ಅರಿವು ರೈತರಲ್ಲಿ ಮೂಡುತ್ತಿದೆ. ಆದರೆ ಯಾವ ಯಾವ ಭೂಮಿಯಲ್ಲಿ ಯಾವ ಯಾವ ತರಹದ ಗೊಬ್ಬರವನ್ನು ಹಾಕಬೇಕು ಎಂಬುದು ರೈತರಿಗೆ ಸರಿಯಾಗಿ ತಿಳಿದಿಲ್ಲ. ಪ್ರತಿಯೊಬ್ಬ ರೈತನು ತನ್ನ ಜಮೀನಿನ ಮಣ್ಣನ್ನು ಸಂಬಂಧಪಟ್ಟ ಇಲಾಖೆಗೆ ಕಳಿಸಿ, ಆ ಮಣ್ಣಿನಲ್ಲಿ ಯಾವ ಯಾವ ಸಾರವಸ್ತುಗಳು ಇವೆ, ಯಾವ ಯಾವ ಸಾರ ವಸ್ತುಗಳು ಇಲ್ಲ ಎಂಬುದನ್ನು ತಿಳಿದುಕೊಳ್ಳುವಂತಹ ಏರ್ಪಾಡನ್ನು ಸರ್ಕಾರದವರು ಮಾಡಬೇಕಾಗಿದೆ. ನಸಾರಜನಕ, ಅಮೋನಿಯಂ ಸಲ್ಫೇಟ್ ಮುಂತಾದವುಗಳನ್ನು ಎಷ್ಟು ಪ್ರಮಾಣದಲ್ಲಿ ಹಾಕಬೇಕು ಎಂಬುದು ರೈತರಿಗೆ ಸರಿಯಾಗಿ ತಿಳಿದಿಲ್ಲ. ಒಂದು ಸಾರಿ ನಮ್ಮ ಕಡೆ ರೈತರು ನಸಾರಜನಕ ಮತ್ತು ಅಮೋನಿಯಂ ಸಲ್ಫೇಟನ್ನು ಹಾಸ್ತಿ ಪ್ರಮಾಣದಲ್ಲಿ ಹಾಕಿ ಬತ್ತವನ್ನು ಬೆಳೆದಾಗ, ಬತ್ತವೆಲ್ಲಾ ಹೆಚ್ಚಿನ ಪ್ರಮಾಣದಲ್ಲಿ ಜೊಳ್ಳಾಗಿತ್ತು. ಹೆಬ್ಬಾಳದಲ್ಲಿ ಮಣ್ಣಿನ ಸಾರವನ್ನು ಕಂಡುಹಿಡಿಯುವ ಕೇಂದ್ರವಿದೆ. ಇಂತಹ ಕೇಂದ್ರಗಳು ಪ್ರತಿಯೊಂದು ಜಿಲ್ಲೆಯಲ್ಲೂ ಸಹ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಮೊನ್ನೆ ದೆಹಲಿಯಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಸೆಮಿನಾರ್ ನಡೆಯಿತು. ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯುವ ಬಗ್ಗೆ ಕ್ರಮಗಳನ್ನು ಕೈಕೊಳ್ಳಬೇಕೆನ್ನುವುದೇ ಅಲ್ಲಿಯ ತಜ್ಞರ ಅಭಿಪ್ರಾಯವಾಗಿತ್ತು. ಒಂದು ಎಕರೆಯಲ್ಲಿ ಒಂದು ವರ್ಷದಲ್ಲಿ ಎಷ್ಟು ಆಹಾರವನ್ನು ಬೆಳೆಯುತ್ತೇವೆ ಎನ್ನುವ ಪ್ರಶ್ನೆಗಿಂತ ಒಂದು ಎಕರೆಗೆ ಒಂದು ದಿನದಲ್ಲಿ ಎಷ್ಟು ಆಹಾರವನ್ನು ಬೆಳೆಯಬೇಕು ಎನ್ನುವ ಬಗ್ಗೆ ದೆಹಲಿಯಲ್ಲಿ ನಡೆದ ಸೆಮಿನಾರ್‌ನಲ್ಲಿ ತಜ್ಞರು ಸಮಾರೋಪನೆ ನಡೆಸಿದರು ಎಂಬುದನ್ನು ನಾವು ಕೇಳಿದ್ದೇವೆ. ಕೆಲವೊಂದು ಆಹಾರಪದಾರ್ಥಗಳನ್ನು ಕೆಲವೊಂದು ಪ್ರಾಂತ್ಯಗಳಲ್ಲಿ ಮಾತ್ರ ಬೆಳೆಯುವುದು ಸಾಧ್ಯ. ಅದೇ ಆಹಾರ ಪದಾರ್ಥಗಳನ್ನು ಬೇರೆ ಪ್ರಾಂತ್ಯಗಳಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಿದರೆ ಅಷ್ಟೊಂದು ಚೆನ್ನಾಗಿ ಬರುವುದಿಲ್ಲ. ಇದು ರೈತರಿಗೆ ಗೊತ್ತಿರುವುದಿಲ್ಲ. ಆದ್ದರಿಂದ ತಜ್ಞರುಗಳು ಯಾವ ಯಾವ ಭಾಗಗಳಲ್ಲಿ, ಯಾವ ಯಾವ ಪ್ರಾಂತ್ಯಗಳಲ್ಲಿ ಯಾವ ಯಾವ ಬೆಳೆಗಳು ಚೆನ್ನಾಗಿ ಬೆಳೆಯುತ್ತವೆ ಎಂಬುದನ್ನು ಸಂಶೋಧನೆ ನಡೆಸುವುದರ ಮೂಲಕ ರೈತರಲ್ಲಿ ಪ್ರಚಾರ ಮಾಡಬೇಕು. ಈ ಸಂಬಂಧದಲ್ಲಿ ರೈತರ ಸಹಕಾರವನ್ನು ತಜ್ಞರುಗಳು ಪಡೆಯಬೇಕು. ಈ ರೀತಿ ಮಾಡದೇ ಹೋದರೆ ನಮಗಿರುವ ಆಹಾರದ ಕೊರತೆಯನ್ನು ತ್ವರಿತವಾಗಿ ನಿವಾರಣೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಎನ್ನುವುದನ್ನು ಸರ್ಕಾರ ಮನಗಾಣಬೇಕು. ಯುದ್ಧದ ಪರಿಸ್ಥಿತಿ ಬಂದಾಗ ಯಾವ ರೀತಿ ತ್ವರಿತವಾಗಿ, ಚುರುಕಿನಿಂದ ಕೆಲಸ ಕಾರ್ಯಗಳನ್ನು ಒಗ್ಗಟ್ಟಿನಿಂದ ಮಾಡುತ್ತೇವೋ ಅದೇ ರೀತಿ, ಅದೇ ವೇಗದಲ್ಲಿ ಆಹಾರವನ್ನು ಬೆಳೆಯುವ ವಿಷಯದಲ್ಲೂ ಕೆಲಸ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಿವೇದನೆ ಮಾಡಿಕೊಳ್ಳುತ್ತೇನೆ.

ಭೂಮಿಯಲ್ಲಿ ಹೆಚ್ಚು ಉತ್ಪನ್ನವನ್ನು ಮಾಡತಕ್ಕಂಥ ಒಂದು ವಿಧಾನವಿದೆ. ಇರತಕ್ಕಂಥ ಖಾಲಿ ಜಾಗವನ್ನು ವ್ಯಪಸಾಯಕ್ಕೆ ಅಳವಡಿಸಿಕೊಂಡು ಮಾಡತಕ್ಕಂಥಾದ್ದು ಮತ್ತೊಂದು ಸಾಧನೆ

ಯಿದೆ. ಬಂಜರು ಪ್ರದೇಶವನ್ನು ದರಖಾಸ್ತು ಮೂಲಕ ಜನತೆಗೆ ಕೊಟ್ಟು ಸಾಗುವಳಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಸಪಸ್ಯಾರು ಲಕ್ಷಾಂತರ ಎಕರೆ ಬಂಜರು ಜಮೀನು ವ್ಯವಸಾಯಕ್ಕೆ ತರಲು ಯೋಗ್ಯವಾದ ಭೂಮಿಯಾಗಿದೆ. ಇಂಥ ಜಮೀನನ್ನು ವ್ಯವಸಾಯಕ್ಕೆ ತರಬೇಕಾದರೆ ಬುಲ್ ಡೋಜರ್ಸ್, ಟ್ರ್ಯಾಕ್ಟರ್ಸ್ ಮೊದಲಾದ ಸರಿಯಾದ ಸಾಧನೆ ಇಲ್ಲದೇ ಹೋದರೆ ಸಾಗುವಳಿಯ ಒಂದು ರೂಪಕ್ಕೆ ತರಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಬುಲ್‌ಡೋಜರ್ಸ್, ಟ್ರ್ಯಾಕ್ಟರ್ಸ್ ಹೆಚ್ಚಿನ ಪ್ರಮಾಣದಲ್ಲಿ ಜನಗಳಿಗೆ ಕೊಟ್ಟು ಬಂಜರು ಭೂಮಿ ಅಬಾದು ಮಾಡಿ ತೀವ್ರವಾಗಿ ವ್ಯವಸಾಯ ಉತ್ಪತ್ತಿ ಜಾಸ್ತಿ ಮಾಡಬೇಕು. ಇದರ ಬಗ್ಗೆ ಸರಕಾರ ಒಂದು ಯೋಜನೆ ಹಾಕಿಕೊಂಡಿದ್ದಾರೆ. ಬುಲ್‌ಡೋಜರ್ಸ್ ಕೊಡುವುದರ ಮೂಲಕ ಒಂದು ವರ್ಷದಲ್ಲಿ 12,000 ಎಕರೆ ಭೂಮಿ ವ್ಯವಸಾಯಕ್ಕೆ ತರುವ ಒಂದು ಯೋಜನೆ ಹಾಕಿಕೊಂಡಿದ್ದಾರೆ. ಸರಕಾರ ಇನ್ನೊಂದು ಕೆಲಸ ಮಾಡಬೇಕಾಗಿದೆ. ಯಾರಾದರೂ ಸಾರ್ವಜನಿಕರು ಈ ವಿಚಾರದಲ್ಲಿ ಮುಂದೆ ಬಂದರೆ ಅಂಥ ಜನಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸಿಕೊಟ್ಟು ಇದಕ್ಕೆ ಅವಕಾಶ ಕೊಡಬೇಕಾದುದು ಅವಶ್ಯಕವಾಗಿದೆ.

ಇನ್ನು ಕೈಗಾರಿಕೆ ಬಹು ಮುಖ್ಯವಾದ ಖಾತೆ. ಕೈಗಾರಿಕೆಯ ಅಭಿವೃದ್ಧಿಗಾಗಿ ಸರಕಾರದವರು ಹೆಚ್ಚಿನ ಸಹಾಯ ಸಹಕಾರ ನೀಡುತ್ತಾ ಬಂದಿದ್ದಾರೆ. ಆದರೆ ಈ ಕ್ಷೇತ್ರದಲ್ಲಿ ಇನ್ನೂ ಮಾಡತಕ್ಕಂಥ ಕೆಲಸ ಬಹಳ ಉಳಿದಿದೆ ಎಂದು ಹೇಳುತ್ತೇನೆ. ಇತ್ತೀಚೆಗೆ ಸುಮಾರು ಕಳೆದ ಒಂದೂವರೆ ವರ್ಷದಿಂದ ದೇಶದಲ್ಲಿ ಕೈಗಾರಿಕೆ ಅಭಿವೃದ್ಧಿ ಕುಂಠಿತವಾಗಿದೆ. ಕೈಗಾರಿಕೆಯಲ್ಲಿ ಶೇಕಡ 30 ರಿಂದ 50ರ ವರೆಗೆ ಉತ್ಪತ್ತಿ ಕಡಿಮೆಯಾಗಿದೆ ಎನ್ನುವುದು ಕಂಡುಬಂದಿದೆ. ದೊಡ್ಡ ಕೈಗಾರಿಕೆಗಳಲ್ಲಿ ಈ ರೀತಿ ಉತ್ಪತ್ತಿ ಕಡಿಮೆಯಾದಮೇಲೆ ಅದನ್ನು ಅವಲಂಬಿಸಿರತಕ್ಕಂಥ ಸಣ್ಣ ಸಣ್ಣ ಕೈಗಾರಿಕೆಗಳ ಉತ್ಪತ್ತಿ ಕೂಡ ಕಡಿಮೆಯಾಗಿದೆ. ಇಂದು ದೇಶದಲ್ಲಿ ಕೈಗಾರಿಕೆ ಬಹಳ ಕಷ್ಟ ಪರಿಸ್ಥಿತಿಯಲ್ಲಿದೆ ಎಂಬುದನ್ನು ಸರಕಾರ ಮನಗಾಣಬೇಕು. ಕೈಗಾರಿಕೆ ಕ್ಷೇತ್ರದಲ್ಲಿ ವ್ಯಕ್ತವಾದ ದೊಡ್ಡ ತೊಂದರೆ ಅಂದರೆ ಕಚ್ಚಾ ಮಾಲು ಒದಗಿಸತಕ್ಕಂಥಾದ್ದು ಮತ್ತು ಅದಕ್ಕೆ ಬೇಕಾಗುವ ಸ್ಪೇರ್ ಪಾರ್ಟ್ಸ್ ಒದಗಿಸತಕ್ಕಂಥಾದ್ದು. ಯಂತ್ರ ಸಾಮಗ್ರಿ ಒದಗಿಸತಕ್ಕಂಥ ಕೊರತೆ ಎದ್ದು ಕಾಣುತ್ತದೆ. ಕಚ್ಚಾ ಮಾಲು ಕೊರತೆ ಅಷ್ಟಾಗಿ ಇಲ್ಲ, ಅದು ಕಡಿಮೆಯಾಗುತ್ತಾ ಇದೆ. ದೇಶದಲ್ಲಿ ಇಂದು ಆಗಬೇಕಾದಂಥ ಯಂತ್ರ ಸಾಮಗ್ರಿಗಳು ಹೆಚ್ಚಾಗಿ ಆಗುತ್ತಾ ಇವೆ. ಕೈಗಾರಿಕೆಗಳಲ್ಲಿ ಇನ್ನೂ ಹೆಚ್ಚಿಸು ಉತ್ಪತ್ತಿ ಮಾಡತಕ್ಕಂಥ ಶಕ್ತಿ ಇದೆ. ಆದರೆ ಉತ್ಪಾದನೆ ಮಾಡಿದ ವಸ್ತುಗಳ ಖರೀದಿ ಮಾಡತಕ್ಕಂಥಾದ್ದು ಕಡಿಮೆಯಾಗಿದೆ. ದೇಶದಲ್ಲಿ ಇರುವ ಕ್ಷಾಮ ಪರಿಸ್ಥಿತಿ ಇದಕ್ಕೆ ಕಾರಣ. ಅಂದರೆ ಕೊಳ್ಳತಕ್ಕ ಶಕ್ತಿ ಕಡಿಮೆಯಾಗಿದೆ. ಉತ್ಪಾದನೆ ಮಾಡಿದಂಥ ಪದಾರ್ಥಗಳಿಗೆ ಸಾಕಷ್ಟು ಮಾರ್ಕೆಟ್ಟು ಸಿಕ್ಕುತ್ತಿಲ್ಲ. ಆದುದರಿಂದ ಈ ಪರಿಸ್ಥಿತಿಯಲ್ಲಿ ಸರಕಾರದವರು ಪರದೇಶದ ಮಾರ್ಕೆಟ್ ಕ್ಯಾಪ್ಚರ್ ಮಾಡಿ ಯಂತ್ರ ಸಾಮಗ್ರಿಗಳನ್ನು ಪರದೇಶಕ್ಕೆ ಕಳಿಸಿ ಮಾರಾಟ ಮಾಡುವ ಮೂಲಕ ಅವಕಾಶ ಕಲ್ಪಿಸಿದರೆ ಹೋದ ಪಕ್ಷದಲ್ಲಿ ಕೈಗಾರಿಕೆ ಪ್ರಗತಿ ಕುಂಠಿತವಾಗುತ್ತದೆ. ಆದುದರಿಂದ ರಾಜ್ಯ ಸರಕಾರದವರು ಕೇಂದ್ರ ಸರಕಾರದವರು ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಪೂರ್ವಕ ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳಿಗೆ ಮನ್ನಣೆ ಕೊಟ್ಟು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸಬೇಕು ಎಂಬ ಅಭಿಲಾಷೆ ನಮ್ಮ ಸರಕಾರಕ್ಕೆ ಇದೆ ಎಂದು ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ದಿಶೆಯಲ್ಲಿ ಹೆಚ್ಚು ಪ್ರಗತಿ ಸಾಧನೆ ಮಾಡಿದ್ದಾರೆ. ಮತ್ತು ಪ್ರಯತ್ನ ನಡೆಸಿದ್ದಾರೆ. ಕಲಕತ್ತ ಬೊಂಬಾಯಿ ನಗರಗಳಿಗೆ ಹೋಗಿ ಅಲ್ಲಿಯ ಕೈಗಾರಿಕೋದ್ಯಮಿಗಳಿಗೆ ಹೇಳಿದ್ದಾರೆ. ಮೈಸೂರು ದೇಶದಲ್ಲಿ ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ವಿಶೇಷ ಸೌಲಭ್ಯ ಒದಗಿಸಲು ನಾವು ತಯಾರಿದ್ದೇವೆ, ಕೈಗಾರಿಕೆ ಸ್ಥಾಪನೆ ಮಾಡಿ ಎಂದು ಪ್ರಚಾರ ನಡೆಸಿದ್ದಾರೆ. ಕೈಗಾರಿಕೆ ಖಾತೆ ನಡಿವರಾದ ಶ್ರೀ ರಾಮಕೃಷ್ಣ ಹೆಗಡೆಯವರೂ ಕೂಡ ಇದೇ ಮಾತನ್ನು ಮದ್ರಾಸಿನಲ್ಲಿ ಹೇಳಿದ್ದಾರೆ. ಮೈಸೂರು ದೇಶದಲ್ಲಿ ಯಾರು ಯಾರು ಕೈಗಾರಿಕೆ ಸ್ಥಾಪನೆ ಮಾಡಲು ಸಿದ್ಧವಿದ್ದಾರೆಯೋ ಅವರಿಗೆ ಎಲ್ಲ ಸೌಲಭ್ಯ ಒದಗಿಸುತ್ತೇವೆ, ಕೈಗಾರಿಕೆ ಸ್ಥಾಪನೆ ಮಾಡಿ ಎಂದು ಹೇಳಿದ್ದಾರೆ. ಇದಕ್ಕೆ ಅನುಕೂಲ ಮನೋಭಾವನೆ ಬರತಕ್ಕಂಥಾದ್ದು ಕಂಡುಬರುತ್ತದೆ. ಅನೇಕರು ಅರ್ಜಿಗಳನ್ನು ಬರೆಯುತ್ತಾ ಇದ್ದಾರೆ. ನಮಗೆ ಸೌಲಭ್ಯ ಕೊಡಬಲ್ಲಿರಾ ಎಂದು ಕೇಳುತ್ತಾ ಇದ್ದಾರೆ. ಈ ಸಂದರ್ಭದಲ್ಲಿ ಒಂದು ಸೂಚನೆ ಕೊಡಲು ಬಯಸುತ್ತೇನೆ. ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಉತ್ತೇಜನ ಕೊಡಬೇಕಾದ ಅವಶ್ಯಕತೆ ಇದೆ. ಅದನ್ನು ಸರಕಾರ ಕೊಡಬೇಕು. ಇಲ್ಲದೇ ಹೋದರೆ ಅವರು ಹಿಂಜರಿಯುತ್ತಾರೆ ಎಂದು ಹೇಳುತ್ತೇನೆ. ಸರಕಾರ ಹಣ ಖರ್ಚು ಮಾಡಿ ಇಂಡಸ್ಟ್ರಿಯಲ್ ಎಸ್ಟೇಟ್ಸ್ ಮಾಡಿ ಕೆಲವು ಕೈಗಾರಿಕೆ ಕಟ್ಟಡಗಳನ್ನು ಷೆಡ್‌ಗಳನ್ನು ಕಟ್ಟಿ ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ. ಈ ಕಾರಣದಿಂದ

(ಶ್ರೀ ಕೆ. ಲಕ್ಕಪ್ಪ)

ಮೈಸೂರು ದೇಶದಲ್ಲಿ ಅದರಲ್ಲಿಯೂ ಬೆಂಗಳೂರು ನಗರದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ಬರಲು ಅವಕಾಶವುಂಟಾಯಿತು. ಇದರಿಂದ ಕೈಗಾರಿಕೆಗಳು ಬೆಳೆದಿವೆ. ಸರಕಾರ ಯಾವ ಧೋರಣೆ ತಾಳುತ್ತಾ ಇದ್ದಾರೆ ಅಂದರೆ ಕೈಗಾರಿಕೆ ಕಟ್ಟಡಗಳಿಗೆ ಹಣ ಖರ್ಚು ಮಾಡುತ್ತಿದ್ದಾರೆ. ಇದಕ್ಕೆ ಅಷ್ಟಾಗಿ ಹಣ ಹಾಕಬಾರದು. ಕೈಗಾರಿಕೆ ಮಾಡತಕ್ಕಂಥವರು ಯಾರು ಮುಂದೆ ಬರುತ್ತಾರೋ ಅಂಥವರಿಗೆ ಭೂಮಿ ಒದಗಿಸಿಕೊಡಬೇಕು. ಕಟ್ಟಡ ಅವರು ಕಟ್ಟುತ್ತಾರೆ. ಕೇವಲ ಭೂಮಿ ಕೊಡುವುದರಿಂದ ಕೈಗಾರಿಕೆ ಜಾಗ್ರತ್ತೆ ಮುಂದೆ ಬರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಬೆಂಗಳೂರು ಇಂಡಸ್ಟ್ರಿಯರ್ ಎಸ್ಟೇಟನಲ್ಲಿ ಕೆಲವು ಸ್ಯೆಟ್ಸ್ ಮಾಡಿ ಅವರಿಗೆ ಕೊಟ್ಟಿದ್ದಾರೆ. ಒಂದು ಚದುರ ಗಜಕ್ಕೆ 17–18 ರೂಪಾಯಿ ಚಾರ್ಜ್ ಮಾಡಿ ಸ್ಯೆಟ್ಸ್ ಕೊಟ್ಟರು. ಕೆಲವು ಜನರು ಸ್ಯೆಟ್ಸ್ ಕೊಂಡರು. ಅಂಥವರು ತಮ್ಮ ಹತ್ತಿರವಿದ್ದ ನರ್ಪ್ಲಸ್ ಹಣ ಭೂಮಿ ಮೇಲೆ ಹಾಕಿ ಕೈಗಾರಿಕೆ ನಡೆಸಲು ಸಾಕಷ್ಟು ಹಣವಿಲ್ಲದೆ ತೊಂದರೆಯಾಗಿದೆ. ಮೂರು ವರ್ಷಗಳಾದರೂ ಕೂಡ ಒಂದೆರಡು ಕೈಗಾರಿಕೆ ಕಟ್ಟಡಗಳು ಬಂದಿವೆ. ಬಾಕಿಯವರು ಕೈಗಾರಿಕೆ ಕಟ್ಟಡದ ಗೋಜಿಗೆ ಹೋಗಿಲ್ಲ.

ಬೆಂಗಳೂರು ನೆಲಮಂಗಲ ರಸ್ತೆಯಲ್ಲಿ ಮೆಷೀನ್ ಟೂಲ್ಸ್ ಕಾರ್ಖಾನೆಯ ಮುಂಭಾಗದಲ್ಲಿ 400–500 ಎಕರೆ ಪ್ರದೇಶದಲ್ಲಿ ಇಂಡಸ್ಟ್ರಿಯರ್ ಎಸ್ಟೇಟ್ ಸೆಕೆಂಡ್ ಸ್ಟೇಜ್ ಎಂದು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ನಾವಿಂದಾರು ಸ್ಯೆಟುಗಳನ್ನು ಮಾಡಿದ್ದಾರೆ. ಅದೆಲ್ಲ ಪೂರ್ತಿಯಾಗಿ ಒಂದು ವರ್ಷಕಾಲವಾಯಿತು. ಈ ಸ್ಯೆಟುಗಳು ಯಾರಿಗೆ ಬೇಕು ಅವರೆಲ್ಲ ಅರ್ಜಿಗಳನ್ನು ಗುಜರಾಯಿಸಿಕೊಳ್ಳಬಹುದು ಎಂದು ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿದ್ದಕ್ಕೆ ಸ್ಯೆಟುಗಳು ಬೇಕು ಎಂದು ಅರ್ಜಿ ಹಾಕಿರುವವರ ಸಂಖ್ಯೆ ಅತ್ಯಲ್ಪ. ಒಂದು ಚದರ ಗಜಕ್ಕೆ ಎಂಟೂವರೆ ರೂಪಾಯಿಗಳ ಬೆಲೆಯನ್ನು ಇದಕ್ಕೆ ಗೊತ್ತುಮಾಡಿದ್ದಾರೆ. ಇದರ ಪ್ರಕಾರ ಒಂದು ಎಕರೆ ಪ್ರದೇಶಕ್ಕೆ ಸುಮಾರು 50 ಸಾವಿರ ರೂಪಾಯಿಗಳಾಗುತ್ತವೆ. ಈ ಪ್ರದೇಶ ಬಿಟ್ಟು ಸ್ವಲ್ಪ ಮುಂದಕ್ಕೆ ಹೋದರೆ ಖಾಸಗಿಯವರ ಭೂಮಿ ಎಕರೆಗೆ 12,000 ರೂಪಾಯಿ ಬೆಲೆಗೆ, ಜಾಸ್ತಿ ಎಂದರೆ 15 ಸಾವಿರ ರೂಪಾಯಿಗಳಿಗೆ ಸಿಕ್ಕುತ್ತದೆ. ಇಂಡಸ್ಟ್ರಿಯಲ್ ಎಸ್ಟೇಟನಲ್ಲಿ ಜಾಗ ಬೇಕು ಎನ್ನುವವನು ಹಣವನ್ನೆಲ್ಲ ಭೂಮಿಯ ಮೇಲೆ ಹಾಕಿದರೆ ಅವನು ಮುಂದೆ ಕೈಗಾರಿಕೆಯನ್ನು ಹೇಗೆ ನಡೆಸುವುದಕ್ಕೆ ಸಾಧ್ಯವಾಗುತ್ತದೆ? ಇದನ್ನು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕು. ನಾನೇ ಈಚೆಗೆ ಒಂದು ಖಾಸಗಿ ಜಮೀನನ್ನು ಕೊಂಡು ಕೊಂಡಿದ್ದೇನೆ. ಸರ್ಕಾರದವರಲ್ಲಿ ಕೊಂಡುಕೊಂಡಿದ್ದರೆ ಏನು ಬೆಲೆಯಾಗುತ್ತಿತ್ತೋ ಅದರ ನಾಲ್ಕನೇ ಒಂದು ಭಾಗಕ್ಕೆ ಆಷ್ಟೇ ಪ್ರದೇಶ ನನಗೆ ಸಿಕ್ಕಿದೆ. ಈ ಕಾರಣದಿಂದ ಸರ್ಕಾರದವರು ಮಾಡಿರುವ ಸ್ಯೆಟುಗಳಲ್ಲಿ ಜಮೀನು ತೆಗೆದುಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಜನರಿಗೆ ತೊಂದರೆಯಾಗುತ್ತದೆ. ಸರ್ಕಾರದವರೇ ಕೈಗಾರಿಕೆಗೆ ಬೇಕಾಗುವ ಹಣವನ್ನು ಕೊಟ್ಟು ಉತ್ತೇಜನ ಕೊಡಬೇಕು ಎಂದು ನಾನು ಹೇಳುವುದಿಲ್ಲ. ಸರ್ಕಾರಕ್ಕೂ ನಷ್ಟವಾಗಬಾರದು, ಕೈಗಾರಿಕೆಗಳೂ ಬೆಳೆಯಬೇಕು. ಈ ರೀತಿಯಲ್ಲಿ ಯೋಜನೆ ಹಾಕಿಕೊಂಡು ಉಪಕಾರ ಮಾಡಬಹುದು. ಸರ್ಕಾರದವರು ಸಾಲ ಮಾಡಿ ಸ್ಯೆಟುಗಳನ್ನು ಮಾಡಿದ್ದಾರೆ. ಸಾಲ ಮಾಡಿರುವ ಹಣಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಇದೆಲ್ಲವನ್ನೂ ಲೆಕ್ಕ ಹಾಕಿಕೊಂಡು ಅದಕ್ಕೆ ಆಗಿರತಕ್ಕ ಖರ್ಚನ್ನು ಲೆಕ್ಕ ಹಾಕಿ ಒಂದೇ ಮೊತ್ತದಲ್ಲಿ ದುಡ್ಡನ್ನು ಕೊಡಬೇಕು ಎಂದು ಕೇಳುವುದರ ಬದಲು 10–15 ವರ್ಷಗಳಲ್ಲಿ ಕಂತುಗಳಲ್ಲಿ ಕೊಡಬೇಕು ಎಂದು ಸರ್ಕಾರದವರು ಮಾಡಿದರೆ ಬಹುಮಟ್ಟಿಗೆ ಜನ ಮುಂದೆ ಬಂದು ಕೈಗಾರಿಕೆಗಳ ಅಭಿವೃದ್ಧಿ ಆಗುವುದಕ್ಕೆ ಅವಕಾಶವಾಗುತ್ತದೆ ಎಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಪೀಣ್ಯ ಗ್ರಾಮದ ಬಳಿ ಶರಾವತಿ ರಿಸೀವಿಂಗ್ ಸ್ಟೇಷನ್ ಮುಂಭಾಗದಲ್ಲಿ ಸುಮಾರು 400–500 ಎಕರೆ ಜಾಗವನ್ನು ಸರ್ಕಾರದವರು ಆಕ್ವೈರ್ ಮಾಡಿಕೊಂಡು ಆ ಜಾಗವೆಲ್ಲವನ್ನೂ ಕೈಗಾರಿಕೆಗಳಿಗೆ ಕೊಡಬೇಕು ಎನ್ನುವ ಯೋಜನೆಯನ್ನು ಹಾಕಿಕೊಂಡಿದ್ದಾರೆಂದು ಕೇಳಿದ್ದೇನೆ. ಈ ಭೂಮಿಯನ್ನು ಯಾವರೀತಿಯಾಗಿ ವಿಲೇವಾರಿ ಮಾಡಬೇಕೆಂದು ಯೋಚಿಸಿದ್ದಾರೆ ಎನ್ನುವುದರ ವಿವರಗಳು ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಈ ವಿವರಗಳನ್ನೆಲ್ಲ ತಿಳಿಸಬೇಕೆಂದೂ, ಇದರಿಂದ ಭೂಮಿಯನ್ನು ಕೈಗಾರಿಕೆಗಳಿಗೆ ತೆಗೆದುಕೊಳ್ಳುವವರಿಗೆ ಅನುಕೂಲವಾಗುತ್ತದೆಂದೂ ಹೇಳಬಯಸುತ್ತೇನೆ.

ಕೈಗಾರಿಕೆಗಳಿಗಾಗಿ ಸ್ಯೆಟುಗಳನ್ನು ಮಾಡಿರುವುದರಲ್ಲಿ ಜನ ಸ್ಯೆಟುಗಳನ್ನು ತೆಗೆದುಕೊಳ್ಳಲು ಮುಂದೆ ಬರದೆ ಹೋದಮೇಲೆ ಆ ಜಾಗವನ್ನು ಕೇಂದ್ರ ಸರ್ಕಾರದವರು ರಾಜ್ಯದಲ್ಲಿ ತೆರೆಯಲಿರುವ ಫೋರ್‌ಮನ್ ಟ್ರೈನಿಂಗ್ ಯೋಜನೆ ಅಂದರೆ, ಕಾರ್ಮಿಕರಿಗೆ ಉಚ್ಚಮಟ್ಟದ ತಾಂತ್ರಿಕ ವಿಚಾರಗಳಲ್ಲಿ ತರಪೇತಿಯನ್ನು ಕೊಡಬೇಕು ಎನ್ನುವ ಯೋಜನೆಯನ್ನು ಮಾನ್ಯ ಮಾಡಿ ಅದಕ್ಕೆ

ಸುಮಾರು 13 ಲಕ್ಷ ರೂಪಾಯಿ ಬೆರೆ ಬರತಕ್ಕ 51 ಎಕರೆ ಜಮೀನನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದು ಬಹಳ ಶ್ಲಾಘನೀಯವಾದ ವಿಚಾರ. ನಮ್ಮ ದೇಶದಲ್ಲಿ ಇತ್ತೀಚೆಗೆ ಅನೇಕ ಜನ ಕೈಗಾರಿಕೆಗಳಲ್ಲಿ ತರಬೇತನ್ನು ಹೊಂದುತ್ತಿದ್ದಾರೆ, ಹೊಂದಿದ್ದಾರೆ. ಆದರೆ ನನಗೆ ತಿಳಿದಮಟ್ಟಿಗೆ ಯಾವ ಉಚ್ಚಮಟ್ಟದ ತರಬೇತಿ ಆಗಬೇಕೋ ಆ ಉಚ್ಚಮಟ್ಟದ ತರಬೇತಿ ನಮ್ಮ ಪೋರ್‌ಮನ್‌ಗಳಿಗೆ, ಕಾರ್ಮಿಕರಿಗೆ ನಮ್ಮ ದೇಶದಲ್ಲಿ ದೊರೆಯುತ್ತಿಲ್ಲ. ಇದುವರೆಗೂ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸರಿಯಾದ ತರಬೇತಾದ ಜನರಿಲ್ಲದೆ ಹೇಗೆ ವಿದ್ಯಾಭ್ಯಾಸವನ್ನು ನಡೆಸುತ್ತಿದ್ದರೋ ಅದೇ ರೀತಿಯಲ್ಲಿ ತರಬೇತಾದ ಜನರಿಲ್ಲದೆ ನಮ್ಮ ಕೈಗಾರಿಕೆಗಳನ್ನು ನಡೆಸುತ್ತಿದ್ದೇವೆ. ಈ ಕಾರಣದಿಂದ ನಾವು ಯಾವ ಹೆಚ್ಚಿನ ಪ್ರಮಾಣದಲ್ಲಿ ಉತ್ಪನ್ನವನ್ನು ಮಾಡಬಹುದೋ ಮತ್ತು ಹಾಗೆ ಹೆಚ್ಚು ಉತ್ಪನ್ನವನ್ನು ಮಾಡುವುದರ ಮೂಲಕ ಬೆಲೆಯನ್ನು ಕಡಮೆ ಮಾಡಬಹುದೋ ಅದನ್ನು ಮಾಡಲು ಸಾಧ್ಯವಿಲ್ಲದೆ ಇರತಕ್ಕೆ ಸ್ಥಿತಿಯಲ್ಲಿದ್ದೇವೆ. ಈಗ ಸರ್ಕಾರದವರು ಯೋಚಿಸಿರುವಂತೆ ಸರಿಯಾದ ತರಬೇತು ಹೊಂದಿದ ಜನರನ್ನು ತರಬೇತು ಮಾಡುವುದರ ಮೂಲಕ ಹೆಚ್ಚು ಉತ್ಪನ್ನ ಮಾಡುವುದಕ್ಕೆ ಮತ್ತು ಕಡಮೆ ಬೆಲೆಯಲ್ಲಿ ಆ ವಸ್ತುಗಳನ್ನು ತಯಾರು ಮಾಡುವುದಕ್ಕೆ ಒಂದು ಅವಕಾಶವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೈಪೋಟಿ ಮಾಡತಕ್ಕ ಪರಿಸ್ಥಿತಿಯನ್ನು ನಾವು ಪಡೆಯಬೇಕಾಗಿದೆ. ಆದ್ದರಿಂದ ಇಂಥ ತರಬೇತಿ ಕೇಂದ್ರಗಳ ಅವಶ್ಯಕತೆ ಹೆಚ್ಚಾಗಿದೆ ಎನ್ನುವುದನ್ನು ಮನಗಂಡು ಕೇಂದ್ರ ಸರ್ಕಾರದವರು ಒಂದು ತರಬೇತಿ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡುತ್ತಿರುವುದು ಬಹಳ ಶ್ಲಾಘನೀಯವಾದ ವಿಚಾರ. ಈ ಕೆಲಸವನ್ನು ಜಾಗ್ರತೆ ಕಾರ್ಯಗತ ಮಾಡಿ, ಆ ಮೂಲಕ ಕೈಗಾರಿಕೆಗಳು ಬೆಳೆಯುವುದಕ್ಕೆ ಹೆಚ್ಚು ಅವಕಾಶವನ್ನು ಕಲ್ಪಿಸಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

Mr. CHAIRMAN.—There are still 10 members who want to take part in the Debate. Tomorrow will be the last day. Day after tomorrow we are taking up non-official business. I request the members to be brief and talk only for 20 or 25 minutes each and finish their speeches.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸಭಾಪತಿಗಳು ಹೇಳಿರುವ ಕಾರಣದಿಂದ ಉಳಿದ ವಿಷಯಗಳನ್ನು ಬಜೆಟ್ ಸಂದರ್ಭದಲ್ಲಿ ಪ್ರಸ್ತಾಪ ಮಾಡಲು ಅವಕಾಶವಿರುವುದರಿಂದ ಹೆಚ್ಚಿಗೆ ಪ್ರಸ್ತಾವ ಮಾಡುವ ಗೋಜಿಗೆ ಹೋಗುವುದಿಲ್ಲ. ಇನ್ನು ಒಂದು ವಿಚಾರವನ್ನು ಮಾತ್ರ ಪ್ರಸ್ತಾಪಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ರಸ್ತೆ ಸಾರಿಗೆ ನಿಗಮದ ವಿಚಾರವಾಗಿ ಸ್ವಲ್ಪ ಪ್ರಸ್ತಾಪ ಮಾಡಬೇಕೆಂದು ನನಗನ್ನಿಸುತ್ತಿದೆ. ರಸ್ತೆ ಸಾರಿಗೆ ರಾಷ್ಟ್ರೀಕರಣವಾದ ಮೇಲೆ ಸುಮಾರು 18,65,00,000 ರೂಪಾಯಿಗಳನ್ನು ಬಂಡವಾಳವಾಗಿ ಹಾಕಿ ರಸ್ತೆ ಸಾರಿಗೆ ನಿಗಮ ಕೆಲಸವನ್ನು ನಡೆಸುತ್ತಿದೆ. ಆದರೆ 1966–67ರಲ್ಲಿ ಎಷ್ಟು ರಾಭ ಬಂದಿದೆ ಎಂದು ನೋಡುವುದಾದರೆ ಕೇವಲ 58. 65 ಲಕ್ಷ ರೂಪಾಯಿಗಳು ಎಂದರೆ ಹಾಕಿರತಕ್ಕ ಬಂಡವಾಳದ ಮೇಲೆ ಸೇಕಡ ಮೂರೂಕಾಲು ಪ್ರಕಾರ ರಾಭವನ್ನು ಸಂಪಾದಿಸಿದೆ. ಅದನ್ನು ನೋಡಿದರೆ ರೋಡ್ ಟ್ರಾನ್ಸ್‌ಪೋರ್ಟ್‌ನವರು ಇನ್ನೂ ಹೆಚ್ಚಿನ ಕೆಲಸವನ್ನು ಮಾಡಬೇಕಾದಂಥ ಪ್ರಮೇಯವಿದೆ, ಇದು ಹೆಚ್ಚಿಗೆ ಆದಾಯವನ್ನು ಗಳಿಸುತ್ತಿಲ್ಲ ಎಂದು ನನಗನ್ನಿಸುತ್ತದೆ. ರಾಷ್ಟ್ರೀಕರಣ ಮಾಡುವುದಕ್ಕೆ ಮುಖ್ಯ ಕಾರಣ ಸರಕಾರದ ಬೊಕ್ಕಸಕ್ಕೆ ಹೆಚ್ಚು ಆದಾಯ ಬರಬೇಕೆಂಬುದು ಮತ್ತು ಜನರಮೇಲೆ ನೇರ ತೆರಿಗೆಯನ್ನು ತಪ್ಪಿಸಬೇಕೆಂಬುದು. ಅದರೆ ನಮ್ಮ ನಿರೀಕ್ಷಣೆಗನುಗುಣವಾಗಿ ಆದಾಯ ಬಾರದಿರುವುದು ಮನಸ್ಸಿಗೆ ಸ್ವಲ್ಪ ನೋವನ್ನುಂಟುಮಾಡಿದೆ. ಈಗ ಸಂಬಂಧಪಟ್ಟ ಬೋರ್ಡಿಗೆ ನಾನೂ ಒಬ್ಬ ಸದಸ್ಯನಾಗಿದ್ದೇನೆ. ಆದುದರಿಂದ ಕಡಮೆ ಆದಾಯ ಬರುವುದಕ್ಕೆ ಕಾರಣವನ್ನು ಕಂಡು ಹಿಡಿಯಲು ಅವಕಾಶವಾಗಿದೆ. ಏನೇ ಇರಲಿ, ಕೇವಲ ಸೇಕಡ ಮೂರೂಕಾಲರಷ್ಟು ಆದಾಯ ಬರುತ್ತಿರುವುದು ನಿಜವಾಗಿಯೂ ಸಾಲದು, ಸಾಕಷ್ಟು ಸಾಧನೆಮಾಡಿಲ್ಲ ಎಂದು ನನಗನ್ನಿಸುತ್ತದೆ. ಬಿ. ಟಿ. ಎಸ್. ಎಂಬುದು ರಸ್ತೆ ಸಾರಿಗೆ ಕಾರ್ಪೊರೇಷನ್ನಿನ ಒಂದು ಭಾಗವಾಗಿದೆ. ಇದರಲ್ಲಿ 40 ಲಕ್ಷ ರೂಪಾಯಿಗಳಿಗೆಗೆ ಉತ್ಪತ್ತಿ ಬಂದಿರಬಹುದು, ನಷ್ಟವಾಗುತ್ತಿದೆ ಎಂದು ಹೇಳುತ್ತಾರೆ. ಕೇವಲ ಹಣವನ್ನು ಗಳಿಸುವ ದೃಷ್ಟಿಯಿಟ್ಟು ನಡೆಸಿದರೆ ಅದು ಸರಿಯಾಗಿರುವುದಿಲ್ಲ, ಜನರಿಗೆ ಹೆಚ್ಚು ಸೌಲಭ್ಯವೊದಗಿಸುವುದು ಬಹಳ ಮುಖ್ಯ ಎಂದು ಕೆಲವರು ವಾದಿಸಬಹುದು. ಅದು ಸರಿಯಾದ ವಾದವೆಂದು ನಾನು ಒಪ್ಪುತ್ತೇನೆ. ಆದರೆ ಯಾವ ಸರಕಾರವೇ ಆಗಲಿ ನಷ್ಟಮಾಡಿಕೊಂಡು ಅದನ್ನು ನಡೆಸಬಾರದು ರಾಭವಿಲ್ಲದಿದ್ದರೂ

(ಶ್ರೀ ಕೆ. ಲಕ್ಕಪ್ಪ)

ಎಷ್ಟು ಖರ್ಚು ಮಾಡಿರುತ್ತಾರೋ ಅಷ್ಟಾದರೂ ನಿರೀಕ್ಷೆಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡುವುದು ನ್ಯಾಯವಾದ ಮಾರ್ಗ ಎಂಬುದನ್ನು ಎಲ್ಲರೂ ಒಪ್ಪಬೇಕು. ಆ ರೀತಿ ನಷ್ಟವಾಗದಂತೆ ನೋಡಿ ಕೊಳ್ಳುವುದು ಸರಿಯಾದ ಮಾರ್ಗ. ಲೋಪದೋಷಗಳಿದ್ದರೆ ಅವನ್ನು ತಗೆದು ನಷ್ಟವನ್ನು ಸರಿಪಡಿಸಿಕೊಳ್ಳಬೇಕು. ವಿಧಿಯಿಲ್ಲದಿದ್ದರೆ ಸ್ವಲ್ಪಮಟ್ಟಿಗೆ ಬಸ್‌ಛಾರ್ಜನ್ನಾದರೂ ಜಾಸ್ತಿಮಾಡಿ ನಷ್ಟವಾಗದ ರೀತಿಯಲ್ಲಿ ನಡೆಸುವುದು ಬಹಳ ಅಗತ್ಯವಾದುದು. ಮತ್ತು ಎಂ. ಎಸ್. ಆರ್. ಟಿ. ಸಿ. ಬಸ್ಸುಗಳಿಂದ ಸೇಕಡ ಮೂರೂಕಾಲಿಗಿಂತ ಜಾಸ್ತಿ ರಾಭ ಬರುವಂತೆ ವ್ಯವಸ್ಥೆ ಮಾಡಬೇಕಾದರೆ ಈಗ ಹೆಚ್ಚು ಉತ್ಪತ್ತಿ ಬರುವ ಲೈನುಗಳನ್ನು ಸರಕಾರ ಇಟ್ಟುಕೊಳ್ಳಬೇಕು. ರಾಷ್ಟ್ರೀಕರಣ ಮಾಡುವಾಗ ಕೆಲವು ಸಣ್ಣ ಪುಟ್ಟ ಲೈನುಗಳೇನಿವೆ, ಸುಮಾರು 50 ಮೈಲಿ ಗಳೊಳಗಿರುವುದನ್ನು ಅಲ್ಲಿ ಸಾಕಾದಷ್ಟು ಪ್ರಯಾಣಿಕರಿರದೆ ಉತ್ಪತ್ತಿ ಬಾರದಿರುವುದರಿಂದ ಅಂಥ ಲೈನುಗಳನ್ನು ಖಾಸಗಿಯವರಿಗೆ ಬಿಟ್ಟರೆ ಅವರು ರಾತ್ರಿಹಗಲು ನಾರ್ಮಾರು ಟ್ರಿಪ್ ಓಡಿಸಿ ಸ್ವಲ್ಪ ಮಟ್ಟಿಗೆ ರಾಭ ಬರುವಂತೆ ಮಾಡಿಕೊಳ್ಳುತ್ತಾರೆ, ಹೇಗೋ ನಡೆಸಿಕೊಂಡು ಹೋಗುತ್ತಾರೆ. ಅವನ್ನು ಸರಕಾರ ನಡೆಸುವುದಕ್ಕೆ ಸಾಧ್ಯವಿಲ್ಲ. ಅಂಥ ಸನ್ನಿವೇಶಗಳಲ್ಲಿ ಆದಾಯ ಇಲ್ಲದಿರುವ ಸಣ್ಣ ಪುಟ್ಟ ಲೈನುಗಳನ್ನು ಖಾಸಗಿಯವರಿಗೆ ಬಿಟ್ಟು ದೊಡ್ಡ ಲೈನುಗಳನ್ನು ಮನಾಪಲ್ ಮಾಡಿ ಕೊಂಡರೆ ಸೇಕಡ 15ರವರೆಗೆ ರಾಭ ಬರುವುದಕ್ಕೆ ಸಾಧ್ಯವಿದೆ ಎಂದು ತೋರುತ್ತದೆ. ಖಾಸಗಿ ಬಸ್ಸುಗಳವರು ಬಸ್ಸುಗಳ ಡಿಪ್ರಿಸಿಯೇಷನ್ ಇತ್ಯಾದಿ ಲೆಕ್ಕ ಹಾಕುವುದಿಲ್ಲ, ಸರಕಾರ ಡಿಪ್ರಿಸಿ ಯೇಷನ್‌ಗೆ ಸುಮಾರು ಸೇಕಡ 18 ಕಳೆಯುವುದು ವಾಡಿಕೆಯಾಗಿದೆ. ಹೀಗೆ ಕಳೆಯುವುದರಿಂದ ಹೆಚ್ಚು ಆದಾಯ ಕಾಣುವುದಿಲ್ಲ ಎನ್ನುತ್ತಾರೆ. ಡಿಪ್ರಿಸಿಯೇಷನ್‌ಗೆ ಕಳೆಯಬೇಕಾದ್ದು ನ್ಯಾಯ. ಕಳೆದಮೇಲೆ ಆದಾಯ ಬರುವುದು ಮುಖ್ಯವೇ ಹೊರತು ಡಿಪ್ರಿಸಿಯೇಷನ್ ಇಲ್ಲದೆ ಆದಾಯ ಲೆಕ್ಕಮಾಡುವುದು ಸರಿಯಲ್ಲ. ಆದುದರಿಂದ ಖಾಸಗಿ ಜನರೊಡನೆ ಹೋಲಿಕೆ ಮಾಡುವುದು ಸರಿಯಲ್ಲ. ಈ ಬಾಬಿನಲ್ಲಿ ಹೆಚ್ಚು ಆದಾಯ ಬರುವುದಕ್ಕೆ ಇರಾಖ ಒಂದು ಸುವ್ಯವಸ್ಥಿತವಾದ ರೀತಿಯ ಕಾರ್ಯ ಕ್ರಮ ಹಾಕಿ ಚೆನ್ನಾಗಿ ಕೆಲಸ ಮಾಡಿ ಆ ಮೂಲಕ ಸರಕಾರಕ್ಕೆ ಹೆಚ್ಚು ಆದಾಯ ಬರುವಂತೆ ಪ್ರಯತ್ನ ಮಾಡಬೇಕು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

Sri K. R. ACHAR (Legislative Assembly Constituency).—Mr. Chairman, Sir, I would like to comment only on a few points which I feel are very important.

Remarks have been made that the Governor's Address is more or less a catelogue of events, something like a school report and that it is not upto the level expected of the Governor. It is bound to be a calendar of events. I wish very much that it had rather dealt more with general policies than with particular points such as dairy scheme or scholarships to some students in a girls' college and so on. Of course, they could be referred to. I did really feel that the address ought to have devoted more space to dilate on important policy matters such as border question, Krishna waters and language question. These matters should have been dealt with at greater length and in greater detail. I must also say that the way it has been discussed is not uptodate, if I might say so. The border question, the language question and the Krishna Waters are matters on which the policy of the Government, the decisions they have taken and the action they are going to take in the coming year ought to have been more elaborately discussed.

One thing I have repeatedly said practically ever since I become a member of this Council and which I would once again like to repeat is that in the Parliament we have got what are called Consultative Committees. I distinctly remember that my hon'ble Friend Sri

Mallaradhya had also been repeatedly referring to it. Whetever it may be, I very much wish that these Consultative Committees regularly met and discussed matters. No doubt, one or two meetings were held and I was also put into one committee. But later on I found that these committees did not meet at all and no point, especially matters of policy were discussed. My experience is that these Consultative Committees were and are even now useful committees. Members representing Government and members representing different parties are there on these committees. If they work in a proper manner, it is very useful and if there is difference of opinion on any point, it is discussed threadbare and a conclusion is arrived at. After that, the Government may or may not agree with it and they may proceed with the formulation of the policy. But, nothing of that kind is done. I was put into the Buildings Committee. Lot of money is being spent on buildings and our economy suffers on account of that. If such subjects are discussed, something substantial may come out of the discussion and the policy may change. I find that the Consultative Committee has not properly worked at all. I very much wish that at least hereafter the Government should take steps to see that at every Ministry a Consultative Committee is created and important matters relating to that Ministry are discussed and the future policies decided. We can have such meetings at least once after three Sessions-generally we have three Sessions in a year.

The next important subject on which I would like to say a few words is about law and order in the State. This looks to be one of the most important matters affecting the administration and the peace and development of the State. All over the country the same problem is there. In our State, I find that this question of law and order has deteriorated to a large extent. Apart from the Madhugiri incident, the general attitude towards law and order seems to be deteriorating. Everywhere we find that law is not respected. Why it is happening like that is a question which has to be deeply considered. The latest is the student movement. But, what is happening among the legislators themselves ? The other day, I referred to the question of walk-out by the Opposition members to the Governor's Address. On a similar incident previously, a Committee was appointed and it came to the conclusion that disrespect shown to the Head of the State is certainly against law. This attitude of disrespect for law and order starts not merely from the student-class-of course, advantage is taken by the goondas of such incidents-but from the legislators themselves. Even if the members of the Legislature take this attitude, naturally it has its effect on the whole State and the law and order position is bound to deteriorate. If the members do not want to come and listen to the Address by the Governor, they need not come at all. But, having come, why should they obstruct the Governor from delivering his speech ? My friends, Sri Anjanappa and Shivanandaswamy are not here, who said that it is their birth-right. Why on earth they should do like that, I do not know. The other day I only suggested

(SRI K. R. ACHAR)

for some sort of penalty so that such things may not happen again. But, I was surprised by their attitude. That attitude is wrong. Showing disrespect to the Head of the State, is disrespect for democracy and disrespect to democratic traditions. And, if such attitude spreads amongst the ordinary people, I do not know how we will be able to have law and order. We had firing in Mangalore, for the first time, recently, but fortunately nobody died. This incident happened on the question of Hindi. I must give my compliments to the Superintendent of Police, who very well handled the situation. Even during Quit India Movement, Salt Satyagraha and the fight for Independence, there was no firing in Mangalore, this kind of disobedience, to law was not prevalent. This time, the Police took steps and the movement ended. Of course, some property was destroyed, by the goondas, who took undue advantage of such situations. I wish to make a suggestion to avoid such incidents at least in future. Before such events start or even when there is a sort of atmosphere for such a situation, the Deputy Commissioner and the Superintendent of Police of the respective District, must immediately take action to convene a meeting of the public, the leaders of different communities, to tackle such a problem immediately. I do not know whether this was done in other parts of the State. One thing I have found is, very often the Deputy Commissioners do not move in such matters. If they take steps immediately, it is sure to end peacefully. At Ullal in our District a similar incident happened between two communities recently. At the instance of my good friend, Sri K. K. Shetty, the District Congress Committee President, the Deputy Commissioner immediately took steps, formed a Committee of all sections of the people and they were able to control the situation. This should be adopted at all places.

The next point is about the Language issue. This is a burning question. I support 3 language formula. We have no other solution. In this regard, the attitude of the people of the north as well as some of our people seems to be absolutely wrong. No doubt they are forcing on us. But in our own interest, in the interest of the whole of India and in the interest of having some scope for employment, it is very necessary our people also should learn Hindi. I have absolutely no doubt in this question. I have got experience both in Parliament and amongst public in the North. It is very necessary that our people should learn Hindi, whether that Hindi is a higher one or with some low standard, that has to be decided by us. I wish this Hindi should have been brought earlier and it should have been made compulsory. Some hundreds and thousands of people have already learnt Hindi in non-Hindi States. Much progress has been made in Madras State. When this was the position, they should not have forced it on them. If they had not forced it, it would have developed well in the natural course. But anyway Hindi is most essential for South Indians. Suppose we put a

question in Parliament in English. We get reply in English. But the subsequent supplementaries will be in Hindi only. The main questioner will not understand anything and he cannot put any more questions. He will be in a helpless condition. Therefore, this Hindi is required there and everywhere in North India. But at the same time we should not forget English also. This language is very necessary for higher education, otherwise we will be nowhere. So far as Kannada is concerned, we do require it. Of course there is a burden so far as the South Indians are concerned with regard to three language formula. So far as the resolution is concerned; the Congress Working Committee has passed that resolution, I do not want to go into the matter. But it is admitted that the burden is more on South Indians. But how long it will take to decide this question ? It is a question to be decided by the people in Hindi areas. Mr. Jawaharlal Nehru was of the firm opinion that the Non-Hindi areas should consent for introduction of Hindi. Of course some time is necessary to switch on to Hindi, as per the wishes of the late Prime Minister Nehru and the Present Chief Minister. It is rather surprising for one State to veto the whole decision of the country. I do not like that attitude. It is not a question of veto but it is this question of accepting in the interest of the entire nation as a whole. So far as I am concerned, I emphaticaly say it must be three language formula. I do say there are difficulties. This question must be left to the elders. The students should not get themselves involved any longer. No doubt the students are right in their thinking. They have made their mind known to the country. But it is not for them to decide. They must leave it to the elders. The elders must decide the matter. I would like to make one suggestion. *i.e.*, all people in non-Hindi areas must meet together and come to a decision with regard to this question. It is not only the 4 States in the South, even Bengal must also join in deciding the question. Bengal is also having this trouble. But the Hindi fanatics should not be allowed to go on in their way. I know how fanatic they are. The Prime Minister and Mr. Kamaraj are trying to bring about some sort of solution to this problem. If the Non-Hindi States go in their way, we will be in danger.

I would like to say a few words about Mahajan Commissions's report. There is no difference of opinion about the implementation of this report. Everybody has conceded that this report has been drawn up by an eminent judge and it should be given effect to. But there are some people in Mysore who do not agree with the views of that eminent judge and they want to have *status quo*. The Maharastrians wanted a Commission to be appointed. This Judge had gone into the whole question and submitted his report dividing the borders between Maharastra and Mysore and Mysore and Kerala. Some people argue the whole thing must be given effect to. So far as *status quo* is concerned, I am against it. If the *status quo* continues, we will have to lose Kasargod once for all and there will be no chance of its coming to Mysore. So far as the opinion of the North Mysore is concerned, they have very much

(SRI K. R. ACHAR)

concentrated their mind on Belgaum only. This is not a correct way. It is not sufficient if we get Belgaum. So far as taking the consensus of the people is concerned, I entirely disagree with that opinion.

MR. CHAIRMAN.—How much time would the Hon'ble member like to take ?

SRI K. R. ACHAR.—About 10 minutes.

MR. CHAIRMAN.—The House will now rise and meet again at 4-30 P.M.

The House rose at Four of the Clock to re-assemble at Thirty Minutes past Four of the Clock.

The House re-assembled at Thirty minutes past Four of the Clock.

[MR. DEPUTY CHAIRMAN in the Chair].

SRI K. R. ACHHR.—I was dealing with the Mahajan Commission Report. I said that a consensus is neither reasonable nor even democratic. In fact, if I have understood correctly, consensus is to arrive at an agreed conclusion with regard to any question. So far as Kasargod Boundary Commission is cancerned, for the last 12 years, there were efforts to come to an understanding between Kerala Leaders and South Kanara Leaders. In fact, even communist leader Mr. Namboodaripad and the Congress Leader Mr. Govindan Nair have written letters saying that the northern portion of Kasargod must go to Mysore. Somehow, when it came to a question of settlement, the party which is in power at that time does not agree. They put forward some plea or other, and settlement is not arrived at. That means, throughout we have disagreed. How can there be consensus ? It is said that it is not only a consensus of Kerala and Mysore, but it is a national consensus. I submit this cannot take place at all. How could Mysore Congress agree ? Where agreement could not be arrived at, the Central Government had to decide and appoint a one-man Commission. So, this question of consensus is not at all possible to solve this question. I say it is not democratic also. The first democratic principle is that persons concerned should decide this matter. The next principle is persons concerned must have an interest in the matter. What is the interest of Himachal Pradesh or Assam or Tamilnad in this matter ? How are they interested and entitled to represent ? How is their consensus, in any sense, democracy ? I submit this attempt at consensus is certainly not a just one. On the other hand, this question is a controversial question. On account of that, the Central Government came to the conclusion that the only possible solution is to appoint a judge and this able judge, a man of integrity who is well-known all-over India for his ability and integrity has decided. What he has decided is practically what the

leaders of the several parties have conceded. So, to ask for consensus is absolutely wrong. It is not consensus, but it is forcing matters on persons who do not agree and by persons who are not interested in it. So, so far as border question is concerned, this principle of consensus is neither fair nor democratic nor reasonable. The report as it is must be enforced. It is a local question. It is not a national question. From that point of view consensus is not desirable. Some friends have not fully understood this aspect of the question and they said that status quo must continue. That is not desirable. But late Mr. Mahajan has said that there has to be change in the boundary between Kerala and Mysore. But between Maharashtra and Mysore, probably there is little difference of opinion. Some people there are prepared for *status quo*. But I say that is also not proper. The Mahajan Commission Report must be enforced as it is and fully and any other attempt is wrong. I am sure the Government has taken up this question with a strong decision and I request them to continue that.

And then Sir, I had noted a few other points on the question of education. The only point was that there was a little difference of opinion on education and it was said that no doubt there is massive progress in education, but the quality of education has deteriorated. Probably when we want mass education, possibly it breeds its own consequences. Just as when development takes place, very often inflation comes in—it is an economic principle. So far as education also is concerned, we want education on a mass scale, when there are no sufficient teachers, it is likely that standards are a little deteriorated. But all the same, this is record progress and we can be very proud of it; and we are very glad we must congratulate the previous Education Minister and also the present Education Minister for the massive progress registered in the field of education. In that connection, we should almost ignore the deterioration of the standard. I do say that the standard has to be improved. But probably that should be the ideal to see that not only quantity but also the quality is improved.

One more point I wanted to say is about the evil that has crept into the higher education. Right from 1963 people know what opinion I have held about this capitation fees that is collected in some private colleges. Now I find it has reached the worst limits. I had once told Mr. Nijalingappa and he had promised to take up this question. I hear it not only in my district, but you hear the same story from Gulbarga, from Belgaum and other areas where there are private medical colleges. We hear so many things about it. Thousands of rupees are collected—I find palaces are coming up in my part of the country. There can be no doubt. Probably if there is a proper enquiry and if there is an audit, there can be no doubt about this point. Lots of funds are being collected by private individuals in the name of capitation fees and a few people are becoming rich. It is practically black-marketing education. These colleges ought not to be allowed to do it. I find

(SRI K. R. ACHAR)

these things are vitiating. Not only in medical colleges, but also in ordinary science and arts colleges, you find that this evil spreading—especially in colleges run by one Association. This system of collecting funds without proper accounting, must be stopped. I request the Government to study these things. If a committee is appointed to go into this matter, there will be plenty of evidence. I know personally how some boys are made to pay large sums of money and seats are booked for the future. I am told that future booking has not stopped. But it is our duty to see that this kind of black-marketing education is stopped. No doubt we are proud of massive strides in education. But this sort of capitation fee is absolutely against socialism, because it is only rich people who are getting the advantage. I would not mind if Government are not spending money on these colleges. But what huge sums of money they are spending for creatlng medical education facilities? How much has been spent in Gulbarga, how much has been spent in Mangalore? It is all public money. When Government are spending so much money, why give an opportunity to a few people to become rich? On the other hand, it is denying opportunity for the poor. It is only rich people who can stand on their own legs.

One or two other points I had noted, but I will omit for want of time. Now I would like to say a word about the Mangalore Port. We are really very happy that the port is coming up at Penambur. The One point I would like to urge is the aspect of acquisition of lands for this port. It is also said that lands are being acquired for the purpose of an industrial unit that is proposed in the area, namely the Fertiliser project. Especially with regard to industrial concerns, if we can have alternate lands three or four miles by the side of the proposed railway line, why should Government take the land of these poor people which is in a thickly populated area? That leaves the agriculturists suffering. In the South Kanara, very often it happens that the fertile lands lie near the coast line and that area is very thickly populated. If we can find suitable alternate lands hardly 6-7 or 8 miles from the present spot, why should not Government consider this question? Some how it looks to me that these concerns can easily be located a few miles away from the thickly populated areas without causing suffering and hardship to the poor agriculturists. These are very fertile and valuable lands and naturally the raiyats are reluctant to surrender those lands for the purpose of locating the industry. I wish that the Government should examine this point and do the needful.

†ಶ್ರೀ ಸಿ. ಬಂದೀಗೌಡ (ಉಪಾಧ್ಯಾಯರ ಕ್ಷೇತ್ರ).—ಮಾನ್ಯ ಸಭಾಪತಿಯವರೇ, ವಿಧಾನಮಂಡಲದ ಉಭಯ ಸದನಗಳಿಗೆ ಮೈಸೂರಿನ ಮಾನ್ಯ ರಾಜ್ಯಪಾಲರು ನೀಡಿದ ಭಾಷಣ ಕ್ಕಾಗಿ ವಂದನೆಯನ್ನು ಸಲ್ಲಿಸಲು ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ಸೂರ್ಯನಾರಾಯಣ ಅಡಿಗಾ ಅವರು ಈ ಸಭೆಯಮುಂದೆ ತಂದಿರುವ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ. ಈ ಸಂದರ್ಭದಲ್ಲಿ ರಾಜ್ಯಪಾಲರು ತಮ್ಮ ಭಾಷಣದ ಕೊನೆಯಲ್ಲಿ ಕೆಲವು ವಾಕ್ಯಗಳನ್ನು ಕನ್ನಡದಲ್ಲಿ ಓದಿದ್ದಾರೆ. ಅದನ್ನು ನಾನು ತುಂಬಾ ಸಂತೋಷದಿಂದ ಸ್ಮರಿಸಿ

ಕೊಳ್ಳುತ್ತೇನೆ. ಅವರು ಕನ್ನಡದಲ್ಲಿ ಓದಿದ ಮಾತುಗಳು ಇವು ''ವಿಚಾರಪೂರ್ಣ ಚರ್ಚೆ ನಡೆಸಿ, ಅನುನಯ ವಿಧಾನದಿಂದ ತೀರ್ಮಾನ ಕೈಕೊಳ್ಳುವ ಸತ್‌ಸಂಪ್ರದಾಯಕ್ಕೆ ಮೈಸೂರು ವಿಧಾನ ಮಂಡಲದ ನದನಗಳು ಪ್ರಸಿದ್ಧವಾಗಿವೆ. ತಮ್ಮ ನಮಾರೋಚನೆಗಳು ಯಶಸ್ವಿಯಾಗಲೆಂದು ಶುಭಾಶಯಗಳನ್ನು ಸಲ್ಲಿಸಿ, ರಾಜ್ಯದ ಮುಂದಿರುವ ನಾನಾ ನಮಸ್ಯೆಗಳ ಪರಿಹಾರ ಯತ್ನದಲ್ಲಿ ನಿರಂತರ ಪ್ರಗತಿ ಸಾಧ್ಯವಾಗಲೆಂದು ಹಾರೈಸಿ ವಿರಮಿಸುತ್ತೇನೆ'' ಎಂದು ಹೇಳಿದ್ದಾರೆ. ಹಿಂದೆ ಮಹಾಕವಿ ನೃಪತುಂಗನು ''ಕಾರಿತೋ ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್'' ಎಂದು ಹೇಳಿ ನಮ್ಮ ಕನ್ನಡ ನಾಡಿನ ಜನತೆಯ ಬೆನ್ನುತಟ್ಟಿದ್ದಾರೆ. ಈಗ ರಾಜ್ಯದ ಹೊರಗಡೆಯಿಂದ ಬಂದಂತಹ ವಯೋವೃದ್ಧರೂ ಜ್ಞಾನವೃದ್ಧರೂ, ಹಿರಿಯರೂ ಆದ ನಮ್ಮ ರಾಜ್ಯಪಾಲರು ನಮ್ಮ ಬಗ್ಗೆ ಅಭಿಮಾನದಿಂದಲೂ, ಸಂತೋಷದಿಂದಲೂ ಈ ಮಾತುಗಳನ್ನಾಡಿದ್ದಾರೆ. ಈಗ ನಾವು ನಮ್ಮ ಅರ್ಹತೆಯನ್ನು ಉಳಿಸಿಕೊಳ್ಳಲು ನಮ್ಮ ಮುಂದಿನ ಪೀಳಿಗೆಗಾಗಿ ಹೆಣಗಬೇಕಾಗಿದೆ. ರಾಜ್ಯ ಪಾಲರ ಭಾಷಣದಲ್ಲಿ ನಾವು ನಮ್ಮ ದೇಶದ ಒಗ್ಗಟ್ಟು ಬಲಪಡುವಂತೆಯೂ, ರಾಷ್ಟ್ರ ಸಂಘಟನೆಗೆ ನೆರವಾಗುವಂತೆಯೂ ನಾನಾ ನಮಸ್ಯೆಗಳನ್ನು ಬಗೆಹರಿಸಲು ನಾವು ಸದಾ ಶಕ್ತರಾಗಬೇಕು ಎಂದು ಅವರು ಬಹಳ ಅಮೂಲ್ಯವಾದ ಸಲಹೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ.

ಅವರು ಹೀಗೆ ಹೇಳುತ್ತಾರೆ—'' ಯಾವುದೇ ವಿವಾದಗ್ರಸ್ತ ವಿಷಯವನ್ನು ಕೂಲಂಕಷ ಚರ್ಚೆಗೆ ಒಳಪಡಿಸಿ ತೀರ್ಮಾನ ಕೈಕೊಳ್ಳಲು ನಮ್ಮ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಿರುಪಾಧಿಕವಾದ ಅವಕಾಶವಿದೆ. ಹೀಗಿರುತ್ತಾ ದೇಶದ ಸುವ್ಯವಸ್ಥಿತ ಪ್ರಗತಿಗೆ ಅತ್ಯವಶ್ಯವಾಗಿರುವ ಪ್ರಜಾಪ್ರಭುತ್ವದ ಅಡಿಗಟ್ಟಿನ ಮೂಲಕ್ಕೇ ಕುಠಾರ-ಪ್ರಾಯವಾಗುವ ಹಿಂಸಾ ಪ್ರವೃತ್ತಿಗೆ ತೊಡಗಬೇಕಾಗಿಲ್ಲ'' ಎಂದು ದೇಶದಲ್ಲಿ ಈಗ ನಾನಾ ವಿವಾದಗಳು, ಪರಿಹಾರಕ್ಕೆ ಹಿಂಸಾತ್ಮಕ ವಿಧಾನಗಳನ್ನು ಜನರು ಅನುಸರಿಸತಕ್ಕ ವ್ಯಸನಕರವಾದ ಸ್ಥಿತಿ ಒದಗಿರುವಾಗ ಈ ಮಾತುಗಳು ಮರುಭೂಮಿಯಲ್ಲಿ ಜಲಾಸರೆಯನ್ನು ಕಂಡಂತಾಗಿದೆ. ವಿವಾದಾಸ್ಪದವಾದ ವಿಷಯಗಳು ಹಲಕೆಲವು ಇದ್ದೇ ಇರುತ್ತವೆ. ನಮ್ಮಲ್ಲಿ ಭಾಷಾ ವಿವಾದಗಳು ಇವೆ, ನದಿ ನೀರಿನ ನವಸ್ಯೆಗಳು ಇವೆ. ಹಾಗೂ ರಾಜ್ಯದ ಗಡಿ ನಮಸ್ಯೆಗಳು ಇವೆ. ಇವನ್ನೆಲ್ಲಾ ಬಗೆಹರಿಸಿದ ಮೇಲೆ ಮತ್ತೆ ಯಾವುದೂ ನಮಸ್ಯೆಗಳು ಇಲ್ಲವೆಂದಾಗುವುದಿಲ್ಲ. ಕಾಲ ಕಳೆದಂತೆಲ್ಲಾ ಹೊಸ ಹೊಸ ವಿಷಯಗಳು ಉದ್ಭವವಾಗಬಹುದು. ಒಂದು ವಿಷಯವನ್ನು ಕಲ್ಪಿಸುವುದಾದರೆ, 5 ವರ್ಷಕ್ಕೊಮ್ಮೆ ಎತ್ತ ಆಯೋಗದವರು ರಾಜ್ಯದ ಬೊಕ್ಕನಕ್ಕೆ ಕೊಡಬೇಕಾದ ಪ್ರಮಾಣದಲ್ಲಿ ಹಣವನ್ನು ಕೊಡದಿರ ಬಹುದು. ಅವುಗಳೆನ್ನೆಲ್ಲಾ ಬಗೆಹರಿಸಬೇಕಾದರೆ, ನಾವು ಹಿಂಸಾತ್ಮಕ ಪ್ರಚೋದನೆಗೆ ಒಳಗಾಗದಂತೆ ಎಲ್ಲರೂ ಪ್ರಜ್ಞೆಯಿಂದ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಭಾರತ ದೇಶದ ಭವಿಷ್ಯ ಶೂನ್ಯವಾಗುವುದು ಎಂದು ನಾನು ಹೇಳಬಯಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದ ಪ್ರಾರಂಭದಲ್ಲಿ ಇಲ್ಲಿನ ಶಾಸನ ವ್ಯವಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನನಗೆ ಮೊದಲು ಮಾತನಾಡಿದ ನದನ್ಯರೆಲ್ಲರೂ ಇಲ್ಲಿಯ ಶಾಸನದ ವ್ಯವಸ್ಥೆ ದಿನೇ ದಿನೇ ಕುಸಿಯುತ್ತಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನಾನು ಅವರೊಡನೆ ಒಪ್ಪತಕ್ಕವನಲ್ಲ. ಮೈಸೂರು ರಾಜ್ಯದಲ್ಲಿ ಇಂದು ಅರಾಜಕತೆಯ ಪರಿಸ್ಥಿತಿ ಇದೆ, ಎಲ್ಲೆಲ್ಲೂ ಗಲಭೆಗಳು ಆಗಿವೆ ಎಂದೆಲ್ಲಾ ಹೇಳಿದರು. ಒಂದೊಂದು ಕಡೆ ಪೋಲೀಸರು ತಪ್ಪು ಮಾಡಿರಬಹುದು. ಆದರೆ ಅರಾಜಕತೆ ಎಂದು ಹೇಳುವುದು ಸರಿಯಲ್ಲ. ಮೊನ್ನೆ ಮೊನ್ನೆ ಮೈಸೂರು ಮತ್ತು ಬೆಂಗಳೂರಿನಲ್ಲಿ ವಿದ್ಯಾರ್ಥಿಗಳ ಪ್ರದರ್ಶನಗಳು, ಗಲಾಟೆಗಳು ಆದರೂ ಕೂಡ ನಾವು ಒಂದು ಸಣ್ಣ ವಿಷಯವನ್ನು ಗಮನಕ್ಕೆ ತೆಗೆದುಕೊಂಡರೆ, ನಿಮಗೆ ಸಂತೋಷವಾಗಬಹುದು. ಕಾಲೇಜು ವಿದ್ಯಾರ್ಥಿಗಳ ಘೋಷಣೆಗಳು, ಪ್ರದರ್ಶನಗಳು ಅನಿರೀಕ್ಷಿತವಾಗಿ ನಡೆದಿದ್ದರೂ, ಅದೇ ರೀತಿಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ, ಮಾಧ್ಯಮ ಶಾಲೆಗಳಲ್ಲಿ ಸಣ್ಣ ಸಣ್ಣ ಬಾಲಕರು ತಮ್ಮ ಪಾಠಪ್ರವಚನಗಳಲ್ಲಿ ತೊಡಗಿದ್ದರು, ಶಾಲೆಗಳಿಗೆ ಹೋಗುತ್ತಿದ್ದರು ಮತ್ತು ಬರುತ್ತಿದ್ದರು. ಯಾರಿಗೂ ಏನೂ ತೊಂದರೆಯಾಗಿಲ್ಲ. ಇಂಥ ಸಂದರ್ಭಗಳಲ್ಲಿ ಕೋಲಾಹಲ, ಅರಾಜಕತೆಯೆಂದು ಹೇಳುವುದು ತಪ್ಪು. ಆದರೆ ಪೋಲೀಸರು ಇಂಥ ಸಂದರ್ಭಗಳಲ್ಲಿ ವರ್ತಿಸಿದ ರೀತಿಯ ಬಗ್ಗೆ ತುಂಬಾ ಸಮರ್ಪಕವಾಗಿದೆ ಎಂದು ನಾನು ಹೇಳುವುದಿಲ್ಲ. ಗಲಾಟೆಗಳು ಪ್ರಕೋಪಕ್ಕೆ ಬಂದಮೇಲೆ ಅದನ್ನು ದೊಣ್ಣೆ ಬೀಸಿ ಉಪಶಮನ ಮಾಡುವುದು ದೊಡ್ಡದಲ್ಲ. ಇಂಥ ಪ್ರದರ್ಶನಗಳು ಸಮಾಜ ಘಾತುಕವಾದುವುಗಳೆಂದು ಕಂಡರೆ ಪೋಲೀಸರು ಇಂಥ ಸಂಧರ್ಭಗಳಲ್ಲಿ ಜನಗಳನ್ನು ಇಂಥ ಪರಿಸ್ಥಿತಿ ತಲೆದೋರುವ ಮೊದಲೇ ಹತೋಟಿಗೆ ತೆಗೆದುಕೊಳ್ಳುತ್ತಾರೆ. ಅದೇ ರೀತಿಯಾಗಿ ವಿದ್ಯಾರ್ಥಿಗಳು ಇಂಥ ನಿರ್ಧಾರವನ್ನು ತೆಗೆದುಕೊಂಡು ಪಾಠಪ್ರವಚನಗಳಿಗೆ ವಿಮುಖರಾಗುವ ಮೊದಲೇ ರಾಜ್ಯದ ವಾರ್ತಾ ಪ್ರಸಾರ ಇಲಾಖೆಯು ಸರಿಯಾದ ಕೆಲಸ ಮಾಡಬೇಕೆಂದು ನನಗನ್ನಿ

(ಶ್ರೀ ಸಿ. ಬಂಡೀಗೌಡ)

ನುತ್ತದೆ. ಮೊನ್ನೆ ಮೊನ್ನೆ ನಡೆದಂತಹ ಪ್ರದರ್ಶನಗಳಿಗೆ ಕಾರಣವಾದಂತಹ ಭಾಷಾ ವಿವಾದದ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಒಂದು ಭಾಷೆ ಇರಬೇಕು, ಎರಡು ಭಾಷೆ ಇರಬೇಕು, ಮೂರು ಭಾಷೆ ಇರಬೇಕು ಅಥವಾ ನಾಲ್ಕು ಭಾಷೆ ಇರಬೇಕು ಎನ್ನುವುದು ಮುಖ್ಯ ವಿಷಯವಲ್ಲ. ಇಲ್ಲಿ ಯಾವುದರ ಬಗ್ಗೆಯೂ ಹೆಚ್ಚು ಒತ್ತಾಯ ಇರಬಾರದು. ಭಾಷೆಯನ್ನು ಕಲತುಕೊಳ್ಳುವುದಾಗಲಿ ಅಥವಾ ಅದನ್ನು ಉಪಯೋಗಿಸಿಕೊಳ್ಳುವುದಾಗಲಿ, ಯಾರೊಬ್ಬರಿಗೂ ಅನ್ಯಾಯವಾಗುವ ರೀತಿಯಲ್ಲಿ ಇದನ್ನೆರ್ಲಾ ಮಾಡ ಬಾರದು. ಇದು ಬಹಳ ಕಷ್ಟಕರವಾದ ಕೆಲಸವೆಂದು ನನಗೆ ಗೊತ್ತಿದೆ. ಯಾವುದೇ ರಾಜ್ಯದಲ್ಲಿ ನೂರಕ್ಕೆ 90ರಷ್ಟು ಗೊತ್ತಿರುವುದು ಒಂದು ಭಾಷೆ, ಅದು ಅವರ ತಾಯ್ನುಡಿ. ಇನ್ನು ಉಳಿದವರಿಗೆ ಇಂಗ್ಲಿಷ್ ಉಪಯೋಗವಾಗುತ್ತದೆ, ಬಳಕೆಯಲ್ಲಿರುತ್ತದೆ ಮತ್ತು ಅದನ್ನು ತಪ್ಪಿಸುವುದಕ್ಕೆ ಯಾರ ಕೈಯಲ್ಲೂ ಆಗುವುದಿಲ್ಲ. ಅಂದರೆ ಅದರಲ್ಲಿ ನಮಗಿರತಕ್ಕ ಮೋಹ ದಿಂದಲ್ಲ. ಅದರ ಉಪಯೋಗದ ದೃಷ್ಟಿಯಿಂದ. ಭಾರತದಲ್ಲೆರ್ಲಾ ಆಕ್ಸ್‌ಫರ್ಡ್‌ನಿಂದಂತಹ ಭಾಷೆ ಹಿಂದಿಯಲ್ಲದೆ ಅದಕ್ಕಿಂತ ದೊಡ್ಡ ಭಾಷೆ ಬೇರೊಂದಿಲ್ಲ. ದುರದೃಷ್ಟವಶಾತ್ ಕೇಂದ್ರ ಸರ್ಕಾರದ ನೌಕರಿ ವಿಷಯದಲ್ಲಿ ನಮ್ಮ ದೇಶದ ರೋಕಸಭೆ, ರಾಜ್ಯಸಭೆಗಳಲ್ಲಿ ನಡೆಯತಕ್ಕ ಚರ್ಚೆ ಸಂಬಂಧದಲ್ಲಿ ಹಾಗೂ ಇನ್ನಿತರ ನಾನಾದೃಷ್ಟಿಯಿಂದ ಈ ಭಾಷೆಗಳನ್ನು ಸಮಾನವಾಗಿ ಹಂಚುವಂತೆ ಭಾರತ ಸರ್ಕಾರದವರು ಮತ್ತು ಭಾರತದ ನಾಯಕರು ಒಂದು ಸಮರ್ಪಕವಾದ ಮಾರ್ಗವನ್ನು ಕಂಡುಹಿಡಿಯುತ್ತಾರೆಂದು ನಾನು ಆಶಿಸುತ್ತೇನೆ. ಮೈಸೂರು ರಾಜ್ಯದ ಮಟ್ಟಿಗೆ ಹೇಳುವುದಾದರೆ ಇಂಗ್ಲಿಷ್, ಹಿಂದಿ ಇವೆರಡಕ್ಕೂ ದೃಷ್ಟಿಗೆ ನಾವು ಗಮನ ಕೊಡಬೇಕು ಅದೇ ರೀತಿ ಕನ್ನಡದ ಬೆಳವಣಿಗೆ ಮತ್ತು ಉಪಯೋಗ. ನಮ್ಮ ನೆರೆಹೊರೆಯ ರಾಜ್ಯಗಳಲ್ಲಿ ರಾಜ್ಯ ಭಾಷೆಯಮಟ್ಟಿಗೆ ಆದ ಪ್ರಗತಿಯನ್ನು ನೋಡಿದರೆ ನಾವು ತಲೆದೂಗಿನಬೇಕು. ನಾವು ಇಲ್ಲಿ ಸರಿಯಾದ ರೀತಿಯಲ್ಲಿ ಏನೊಂದು ಪ್ರಗತಿಯನ್ನೂ ಮಾಡಿಲ್ಲ. ಇದರಲ್ಲಿ ಎಷ್ಟು ಪ್ರಯತ್ನ ಪಡ ಬೇಕಿತ್ತೋ, ಅಷ್ಟು ಪಟ್ಟಿಲ್ಲ. ಇತ್ತೀಚೆಗೆ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿರುವಂತೆ "ಮೈಸೂರು ರಾಜಭಾಷಾ ಅಧಿನಿಯಮವನ್ನೂ ಕಾರ್ಯಗತ ಮಾಡುವ ಕಾರ್ಯಕ್ರಮದ ಮೊದಲ ಹೆಜ್ಜೆಯಾಗಿ, ಇಂಗ್ಲೀಷ್—ಕನ್ನಡ ಆಡಳಿತ ಶಬ್ದಕೋಶವನ್ನು ಸಿದ್ಧಪಡಿಸಿ ಪ್ರಕಟಿಸಲಾಗಿದೆ ಎಂದು ಒಂದು ಹೇಳಿಕೆ ಇದೆ. ನಾವು ಆಡುವ ಮಾತು ಸ್ವಲ್ಪ ಕಟುವಾಗಬಹುದು. ಈ ಶಬ್ದಕೋಶದ ಪ್ರತಿ ನನ್ನ ಕೈಗೆ ಬಂದಂಗ್ಗೆ ವಿಧಾನಪರಿಷತ್ತಿನ ಅಧಿವೇಶನ ನಡೆಯುತ್ತಿತ್ತು. ಇಲ್ಲಿ ಅದನ್ನು ತೆಗೆದುಕೊಂಡು ನೋಡಿದೆ. ನನ್ನ ಪಕ್ಕದಲ್ಲಿರತಕ್ಕ ಶ್ರೀಮಾನ್ ಕುಬುಸದರವರು ಆ ಸಮಯದಲ್ಲಿ ವಿಜಿಲೆನ್ಸ್ ಕಮಿಶನ್ ವಿಚಾರವಾಗಿ ಮಾತನಾಡುತ್ತಿದ್ದರು. ಆಗ ನಾನು ಪುಸ್ತಕದಲ್ಲಿ ವಿಜಿಲೆನ್ಸ್ ಕಮಿಶನ್ ಎಂಬ ಪದವನ್ನು ಕೆ ಟ್ಟಿದ್ದಾರೇನೋ ಎಂದು ನೋಡಿದೆ. ಆದರೆ ಆ ಪದ ಇರಲಿಲ್ಲ. ಅದೇ ರೀತಿಯಲ್ಲಿ ನಮ್ಮ ಜನರು ಆಡತಕ್ಕ ಅನೇಕ ಇನ್ನಿತರ ಶಬ್ದಗಳನ್ನೂ ಅದರಲ್ಲಿ ಕೊಟ್ಟಿರಲಿಲ್ಲ. ಇನ್ನು ಯಾಕೆ ಆ ಶಬ್ದಕೋಶ? ನಮ್ಮ ವ್ಯವಹಾರದಲ್ಲಿ, ಬಳಕೆಯಲ್ಲಿ ಇರುವಂತಹ ಸಾವಿರಾರು ಪದಗಳು ಇಲ್ಲದಿದ್ದಲ್ಲಿ ಅದರಿಂದ ಯಾವ ಪ್ರಯೋಜನ ಇದೆ! ಈ ಸಂದರ್ಭದಲ್ಲಿ ಇನ್ನೊಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. "ಕನ್ನಡವನ್ನು ರಾಜ್ಯಭಾಷೆಯಾಗಿ ಹೆಚ್ಚು ಹೆಚ್ಚಾಗಿ ಬಳಕೆಗೆ ಬರುವಂತೆ ಮಾಡಲು ಸರ್ಕಾರದವರು ಮುಂದಿನ ವರ್ಷದಿಂದ ರಾಜ್ಯಪತ್ರದ ಇಂಗ್ಲೀಷ್ ಸಂಚಿಕೆಯನ್ನೂ ಕನ್ನಡ ಸಂಚಿಕೆಯನ್ನೂ ಏಕ ಕಾಲದಲ್ಲಿ ಪ್ರಕಟಿಸುವ ತೀರ್ಮಾನ ಕೈಗೊಂಡಿದ್ದಾರೆ" ಎಂದು ಇದೆ. ಹಿಂದೆ ಹಳೆಯ ಮೈಸೂರಿನಲ್ಲೂ ಈ ಪದ್ಧತಿ ಇತ್ತು. ಮತ್ತೆ ಈಗ ತಂದಿದ್ದಾರೆ. ನಾನು ಇದರ ಜೊತೆಗೆ ನಾಲ್ಕಾರು ವರ್ಷಗಳಿಂದ ರಾಜ್ಯಪಾಲರವರ ಭಾಷಣ ಹಾಗೂ ಆಯವ್ಯಯ ಪತ್ರದ ಭಾಷಣವನ್ನೂ ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಓದುವ ಪರಿಪಾಠವನ್ನು ಇಟ್ಟುಕೊಂಡಿದ್ದೇನೆ. ತಪ್ಪು ಭಾಷಾಂತರಗಳು ಪದೇ ಪದೇ ಆಗುತ್ತಿರುತ್ತವೆ ಎಂದು ನಾನು ಇಲ್ಲಿ ಪದೇ ಪದೇ ಹೇಳುತ್ತಿದ್ದರೂ ಇನ್ನೂ ಹಾಗೇ ಆಗುತ್ತಿದೆ. ಇದರ ಬಗ್ಗೆ ಕೆಲವು ನಿದರ್ಶನಗಳನ್ನು ಇದೇ ಭಾಷಣದಲ್ಲಿ ಎರಡು ಮೂರು ಕಡೆ ತೋರಿಸುತ್ತೇನೆ. ಅದರಲ್ಲೂ ಬಹಳ ಮುಖ್ಯವಾದ ವಿಚಾರಗಳಲ್ಲೇ ಹೇಗೆ ತಪ್ಪುಗಳು ಆಗುತ್ತಿವೆ ಎನ್ನುವುದನ್ನು ತಾವು ನೋಡಬಹುದು. ಇದರಲ್ಲಿ ಮಹಾಜನ್ ಆಯೋಗದವರದಿ ಬಗ್ಗೆ ಹೇಳಿದ್ದಾರೆ. ಇದರಲ್ಲಿರುವ ಇಂಗ್ಲೀಷ್ ಭಾಷಣದಲ್ಲಿ.

"Inspite of this, the Government of Mysore made up their mind to accept the same with a view to resolving once and for all the long pending disputes between the neighbouring States

and urge the Government of India to accept the findings of the Commission and implement the same."

ಕನ್ನಡದಲ್ಲಿ ಹೇಗಿದೆ ಎಂದರೆ :

"ಹೀಗಿದ್ದರೂ ನೆರೆಹೊರೆಯ ರಾಜ್ಯಗಳೊಳಗೆ ಎಷ್ಟೋ ಕಾಲದಿಂದ ನಡೆದುಬಂದ ವಿವಾದಗಳನ್ನು ಕೊನೆಯದಾಗಿ ಬಗೆಹರಿಸಬೇಕೆಂಬ ಉತ್ಕಟೇಚ್ಛೆಯಿಂದ ಮೈಸೂರು ಸರಕಾರವು ಈ ಸಲಹೆಗಳೇ ನ್ಯಾಯವಾದ ಪರಿಹಾರ ಮಾರ್ಗವೆಂದು ಒಪ್ಪಿಕೊಂಡು ಇವುಗಳನ್ನು ಕಾರ್ಯಗತ ಮಾಡುವಂತೆ ಭಾರತ ಸರಕಾರವನ್ನು ಒತ್ತಾಯಿಸಿದೆ. ಮೈಸೂರಿನ ವಿಧಾನ ಸಭೆಯೂ ವಿಧಾನ ಪರಿಷತ್ತೂ ಈ ನಿಲುವಿಗೆ ಬೆಂಬಲ ನೀಡಿದೆ."

ನ್ಯಾಯವಾದ ಪರಿಹಾರ ಮಾರ್ಗವನ್ನು ಒಪ್ಪಿಕೊಂಡಂತೆ ಇಂಗ್ಲಿಷಿನಲ್ಲಿರುವ ಭಾಷಣದಲ್ಲಿಲ್ಲ. ಇದರಿಂದ ಎಷ್ಟು ತಪ್ಪರ್ಥವಾಗುತ್ತದೆ ಎನ್ನುವುದನ್ನು ತಿಳಿದವರು ಹೇಳಬೇಕಾಗಿದೆ.

ಇನ್ನು ಹಾಗೆ ಪುಟ 9ರಲ್ಲಿ ಉಚ್ಚ ಶಿಕ್ಷಣದ ಬಗ್ಗೆ ಹೇಳಿದ್ದಾರೆ.

ಪುಟ 11ರಲ್ಲಿ ಇಂಗ್ಲೀಷಿನಲ್ಲಿ ಹೀಗಿದೆ :

"Government have further decided to establish a Board with the Education Minister as Chairman and representatives from the Universities and departments concerned, for the development of Kannada as a medium of higher Education."

ಕನ್ನಡದಲ್ಲಿ ಪುಟ 9 ರಲ್ಲಿ :

"ಇದಲ್ಲದೆ, ಉಚ್ಚ ಶಿಕ್ಷಣ ಮಾಧ್ಯಮವನ್ನಾಗಿ ಕನ್ನಡವನ್ನೇ ಅಭಿವೃದ್ಧಿಗೊಳಿಸುವ ನಿಮಿತ್ತವಾಗಿ ಸರಕಾರದವರು ವಿಶ್ವವಿದ್ಯಾನಿಲಯಗಳ ಮತ್ತು ಆಯಾ ವಿಭಾಗಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಮಂಡಳಿಯನ್ನು ರಚಿಸಿದ್ದಾರೆ."

ಇದರಲ್ಲಿ ಕೂಡ ಒಂದಕ್ಕೊಂದು ವ್ಯತ್ಯಾಸವಾಗಿದೆ. ಇನ್ನು ಯೋಜನೆ ಬಗ್ಗೆ ನೋಡುವಾಗ ಪುಟ 2 ರಲ್ಲಿ ಇಂಗ್ಲೀಷಿನಲ್ಲಿ ಹೀಗಿದೆ :

"The commencement of the Fourth Five-year Plan has been postponed to 1st April 1969, owing to a series of developments which commenced with the aggression on our frontiers by Pakistan in September 1965."

ಕನ್ನಡದಲ್ಲಿ ಪುಟ 2 ರಲ್ಲಿ ಹೀಗಿದೆ :

"ಯೋಜನೆ : ಸೆಪ್ಟಂಬರ್ 1965 ರಲ್ಲಿ ಪಾಕಿಸ್ತಾನವು ಭಾರತದ ಗಡಿಗಳನ್ನು ಆಕ್ರಮಿಸಿತಷ್ಟೇ. ಇದರಿಂದ ಹಲವಾರು ಘಟನೆಗಳು ತಲೆದೋರಿದವು. ಇವುಗಳ ಪರಿಣಾಮವಾಗಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭವನ್ನು ದಿನಾಂಕ 1ನೇ ಏಪ್ರಿಲ್ 1969 ರ ವರೆಗೆ ಮುಂದೂಡಲಾಗಿದೆ.

ಒಂದು ಕಡೆ ಪಾಕೀಸ್ತಾನದ ಆಕ್ರಮಣ ಎಂದು ಇದ್ದರೆ ಇನ್ನೊಂದು ಕಡೆ ಪಾಕೀಸ್ತಾನದವರು ಅಗ್ರೇಷನ್ ಬಗ್ಗೆ ಎಂದು ಇದೆ.

ಹೀಗೆ ಭಾಷಾಂತರ ಮಾಡುವಾಗ ನಮ್ಮ ರಾಜ್ಯದ ಪತ್ರದಲ್ಲೂ ಕಾನೂನುಗಳು ಪದಗಳಲ್ಲಿ ವ್ಯತ್ಯಾಸಗಳಾದರೆ ಕೋರ್ಟುಗಳಲ್ಲಿ ವಿಚಾರಣೆ ನಡೆಸುವಾಗ ವಕೀಲರುಗಳು ಯಾವ ಯಾವ ರೀತಿಯಲ್ಲೊಳ್ಳೀ ವಿವರಣೆಗಳನ್ನು ಮಾಡುತ್ತಾರೆ ಮತ್ತು ಎಷ್ಟೋ ಗೊಂದಲಗಳಿಗೆ ಇವು ಕಾರಣವಾಗುತ್ತವೆ ಎನ್ನುವುದನ್ನೂ ನಾವು ಇಲ್ಲಿ ಗಮನದಲ್ಲಿಡಬೇಕು. ಇಲ್ಲಿ ಕೆಲವಾರು ನಿದರ್ಶನಗಳನ್ನು ಮಾತ್ರ ಹೇಳಿದೆ. ಕನ್ನಡದಲ್ಲಿ ಒಂದೇ ಪದಕ್ಕೆ ನಾನಾ ವಿಧವಾದ ಅರ್ಥಗಳೂ ಇರುತ್ತವೆ. ವೇಸ್ ಅಂಡ್ ಮೀನ್ಸ್ ಎನ್ನುವುದಕ್ಕೆ ಕನ್ನಡದಲ್ಲಿ ಸಾಧನೋಪಾಯಗಳ ಮುಂಗಡ ಪತ್ರ ಎಂದು ಅರ್ಥ. ಆದರೆ ಮುಂದಿನ ವರ್ಷದ ಅರ್ಥಸಚಿವರ ಮುಂಗಡ ಪತ್ರದಲ್ಲಿ ಇದಕ್ಕೆ "ಅರ್ಥೋಪಾಯ

(ಶ್ರೀ ಸಿ. ಬಂಡೀಗೌಡ)

ಅಗ್ರಿಮಧನ'' ಎಂದು ಭಾಷಾಂತರ ಮಾಡಿದ್ದಾರೆ. ಹೀಗೆ ಒಂದು ನಿಷ್ಕರ್ಷೆಯಿಲ್ಲದಂತೆ ಭಾಷಾಂತರಗಳು ಆಗುತ್ತಿವೆ. ಒಂದೊಂದು ಸಾರಿ ಒಂದೊಂದು ರೀತಿಯಾಗಿ ಆಗುತ್ತವೆ. ಈ ರೀತಿ ಅನುವಾದಗಳನ್ನು ಮಾಡುವಾಗ ಸ್ವಲ್ಪ ಅರ್ಥವನ್ನು ತಿಳಿದುಕೊಂಡು ಮಾಡುವುದು ಒಳ್ಳೆಯದು. ಇದಕ್ಕೆ ಮೂರನೇ ವರ್ಷದ ಒಂದು ಭಾಷಣದಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್ ಎನ್ನುವುದಕ್ಕೆ 'ಉದ್ಯಮ ಹಾಗೂ ವಸಾಹತು ಎಂದು ಇದ್ದುದಕ್ಕೆ ಈಗ ಉದ್ಯಮ ಪ್ರಾಂಗಣ ಎಂದು ಇದೆ. ಆದರೆ ಇದಕ್ಕೆ ಬ್ರಾಕೆಟ್ಟಿನಲ್ಲಿ (ಇಂಡಸ್ಟ್ರಿಯಲ್ ಎಸ್ಟೇಟ್) ಎಂದು ಇಂಗ್ಲೀಷಿನಲ್ಲಿ ಇದೆ. ಇದರಿಂದ ಎಷ್ಟೋ ಉಪಕಾರವಾಗಿದೆ.

ಇನ್ನು ಈ ಭಾಷಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಹೀಗಿದೆ :

> ''ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳಲ್ಲಿ ಗೊತ್ತುಪಡಿಸಿರುವ ಪಠ್ಯ ಪುಸ್ತಕಗಳ ಗುಣ ಪ್ರಮಾಣವನ್ನು ಉತ್ತಮಪಡಿಸುವ ನಲುವಾಗಿ ಸರಕಾರದವರು ಪಠ್ಯ ಪುಸ್ತಕ ಗಳ ಸಮಿತಿಯನ್ನು ಪುನರ್ರಚಿಸಿದ್ದಾರೆ. ಅಲ್ಲದೆ ಸಾಧ್ಯವಾದಷ್ಟು ಮಟ್ಟಿಗೆ ಒಂದೊಂದು ವಿಷಯದಲ್ಲಿ ಸಮಗ್ರ ರಾಜ್ಯಕ್ಕೆ ಒಂದೇ ಒಂದು ಪಠ್ಯ ಪುಸ್ತಕವನ್ನು ಗೊತ್ತುಪಡಿಸ ಬೇಕೆಂದು ಸರಕಾರದವರು ತಿರ್ಮಾನಿಸಿದ್ದಾರೆ.''

ಇದು ತುಂಬಾ ಸಂತೋಷದ ವಿಚಾರ. ಇದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನಾಲ್ಕಾರು ಪಠ್ಯ ಪುಸ್ತಕಗಳು ಇರುವುದಕ್ಕಿಂತ ಒಂದೇ ಒಂದು ಪಠ್ಯಪುಸ್ತಕ ಇದ್ದರೆ ಎಲ್ಲರಿಗೂ ಓದಲು ಅನುಕೂಲವಾಗುತ್ತದೆ. ಆದುದರಿಂದ ತಜ್ಞರಿಂದ ಹಾಗೂ ಅನುಭವ ಉಳ್ಳವ ರಿಂದ ಕೂಡಿದ ಒಂದು ಸಮಿತಿಯನ್ನು ಮಾಡಿ ರಾಜ್ಯಕ್ಕೆಲ್ಲಾ ಒಂದೇ ರೀತಿಯಾದ ಒಂದು ಪಠ್ಯ ಪುಸ್ತಕವನ್ನು ಏರ್ಪಾಡು ಮಾಡಿ ಅದನ್ನು ಎಲ್ಲ ಕಡೆಗೂ ಹಂಚುವ ವ್ಯವಸ್ಥೆ ಮಾಡಬೇಕು. ಮತ್ತು ದಿನೇ ದಿನೇ ಜ್ಞಾನವನ್ನು ಸಂಪಾದನೆ ಮಾಡುತ್ತ ಬರುವ ತಜ್ಞರಿಂದ ಪುನಃ ಪರಿಶೋಧನೆ ಮಾಡಿ ಒಳ್ಳೆಯ ಪುಸ್ತಕಗಳು ಬರುವಂತೆ ಏರ್ಪಾಡು ಮಾಡಬೇಕು. ಮತ್ತೆ ಈ ಶಾಸನ ನಭೆಯಲ್ಲಿ ನಮ್ಮಂತಹವರ ಸೌಕರ್ಯಕ್ಕಾಗಿ ಅಚ್ಚು ಹಾಕಿಸಿರುವ ಒಂದು ಶಬ್ದಕೋಶದಂತೆ ವ್ಯವಹಾರ ದಲ್ಲಿರುವ ಅನೇಕರಿಗೆ ಅನುಕೂಲವಾಗುವಂತೆ ಇಂಗ್ಲಿಷಿನಲ್ಲಿ ಬರುವ ಶಬ್ದಗಳಿಗೆ ನೂಕ್ತವಾದ ಕನ್ನಡ ಪದಗಳ ಭಾಷಾಂತರವನ್ನೂ ಏರ್ಪಾಡುಮಾಡಿ ಒದಗಿಸಿಕೊಟ್ಟರೆ ಎಷ್ಟೋ ಉಪಯೋಗ ವಾಗುತ್ತದೆ. ಮತ್ತು ಜನಕ್ಕೂ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ. ಈಗ ಕೆಲವು ಪದಗಳನ್ನು ತೆಗೆದುಕೊಳ್ಳಬಹುದು ಎಂದರೆ ಇಂಗ್ಲಿಷಿನಲ್ಲಿ Agricultural Financial Corporation, Public Service Commission, Agro Industries Corporation, etc., ಎಂದು ಇದೆ. ಇವೆರ್ಲಾ ಈಗ ಬಳಕೆಯಲ್ಲೂ ಬಂದಿದೆ. ಇಂಗ್ಲಿಷಿನಲ್ಲಿ ಮಾತನಾಡುವವರೇನೋ ಮಾತಾಡುತ್ತಾರೆ. ಇಂಗ್ಲೀಷು ಬರದ ಕನ್ನಡ ಜನಕ್ಕೆ ಇವನ್ನು ಮಾತಾಡುವುದು ಕಷ್ಟವಾಗುತ್ತದೆ. ಇದಕ್ಕಾಗಿ ಕನ್ನಡ ಭಾಷೆ ಇನ್ನೂ ಕುದುರಬೇಕು ಮತ್ತು ಇನ್ನೂ ಬೆಳೆಯಬೇಕು. ಈಗ ಕನ್ನಡ ರಾಜ್ಯಭಾಷೆಯಾಗಬೇಕು ಎಂದು ಇದೆ ಮತ್ತು ಮುಂದಕ್ಕೆ ಕನ್ನಡವೇ ವ್ಯವಹಾರದ ಭಾಷೆಯಾಗು ತ್ತದೆ. ಆದುದರಿಂದ ಕನ್ನಡ ಭಾಷೆಯ ಬೆಳೆವಣಿಗೆ ಬಗ್ಗೆ ಇನ್ನೂ ಹೆಚ್ಚು ಪ್ರಯತ್ನಗಳನ್ನು ಮಾಡ ಬೇಕೆಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಬಹಳ ಮುಖ್ಯವಾದ ವ್ಯವಸಾಯದ ಬಗ್ಗೆ ನನ್ನ ಮಾನ್ಯ ಪಿತ್ರರಾದ ಶ್ರೀಮಾನ್ ಹರೀಗೌಡರು ಇಲ್ಲ ಒಂದು ಮಾತನ್ನು ಹೇಳಿದರು. ವ್ಯವ ಸಾಯದ ಇರಾಖೆಯವರು ಜನಗಳಿಗೆ ಸೇವೆಯನ್ನು ಸಲ್ಲಿಸಬೇಕೆಂದು ಎಷ್ಟೋ ಜನ ಅಧಿಕಾರಿ ಗಳನ್ನು ನೇಮಿಸಿದ್ದಾರೆ. ಇದು ಹೇಗೆ ಕೆಲಸ ಮಾಡುತ್ತಿದೆ ಎನ್ನುವುದರ ಸ್ವಾರಸ್ಯವನ್ನು ಇಲ್ಲಿ ಹೇಳಬೇಕಾಗಿದೆ. ಇದು ಹೇಗಾಗಿದೆ ಎಂದರೆ ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ ಅದರಂತಾಗಿದೆ. ಅದು "Too many cooks spoil the broth" ಎಂದು ಇಲ್ಲಿ ಮೊದಲಿಗೆ ಇಬ್ಬರು ಅಧಿಕಾರಿಗಳಿದ್ದರೆ ಮತ್ತೆ ಈಗ ಇನ್ನೊಬ್ಬರು ಅಧಿಕಾರಿಗಳನ್ನು ಇಲ್ಲ ನೇಮಕ ಮಾಡಿದ್ದಾರೆ. ಇದರಿಂದ ವ್ಯವಸಾಯದ ಬಗ್ಗೆ ಯಾವ ರೀತಿ ನಮ್ಮಲ್ಲಿ ಕೆಲಸವಾಗುತ್ತಾ ಇದೆ ಎನ್ನುವುದನ್ನು ಎಲ್ಲರೂ ಗಮನಿಸಬೇಕು. ಇದರ ಬಗ್ಗೆ ರಾಜ್ಯಪಾಲರು ಅವರ ಭಾಷಣದಲ್ಲಿ ಹೇಳಿರುವುದನ್ನು ಓದಿದ ಮೇಲೆ ಯಾವ ಅಭಿಪ್ರಾಯಕ್ಕೆ ಬರಬಹುದು ಎನ್ನುವುದನ್ನ ತಮ್ಮ ಗಮನಕ್ಕೆ ತರುವುದಕ್ಕಾಗಿ ಇಲ್ಲಿ ಸ್ವಲ್ಪ ಅವರ ಭಾಷಣವನ್ನು (ಪುಟ 13 ರಲ್ಲಿ) ಓದುತ್ತೇನೆ. ಅದು ಹೀಗಿದೆ :

> 'ರಾಜ್ಯ ವ್ಯವಸಾಯೋದ್ಯಮ ನಿಗಮವು ಸ್ಥಾಪಿತವಾಗಿದೆ. ಇದು ವರೆಗೆ ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕನವರೂ ಕೋ-ಆಪರೇಟಿವ್

ಎಫೆಕ್ಸ್ ಬ್ಯಾಂಕಿನವರೂ ಪಂಪು ಸೆಟ್ಟುಗಳನ್ನೂ ಟ್ರ್ಯಾಕ್ಟರುಗಳನ್ನೂ ಹಂಚುವ ಕೆಲಸವನ್ನು ವಹಿಸಿಕೊಂಡಿದ್ದರು. ಅವರು ಕೈಕೊಂಡ ಕೆಲಸಕ್ಕೆ ಪೂರಕವಾಗಿ ಈ ಕೆಲಸವನ್ನು ಈ ನಿಗಮಕ್ಕೂ ವಹಿಸಿಕೊಟ್ಟಿದೆ.'

ಇದುವರೆಗೆ ಇಬ್ಬರು ಮಾಡುತ್ತಿದ್ದ ಕೆಲಸಗಳನ್ನು ಇನ್ನು ಮೇಲೆ ಮೂರು ಜನರು ಮಾಡುತ್ತಾರೆ. ಮೂರು ಜನ ಸೇರಿಕೊಂಡು ಕೆಲಸ ಮಾಡಿ ಒಬ್ಬ ರೈತನಿಗೆ ಉಪಕಾರ ಮಾಡಬೇಕೆಂದು ಮಾಡುವುದೇನೋ ಸ್ವಾಗತಾರ್ಹವಾದ ವಿಚಾರವೇ. ಎಲ್ಲರೂ ಸೇರಿ ಕೆಲಸ ಮಾಡಬೇಕು ಎನ್ನುವ ಉದ್ದೇಶದಿಂದರೇನೋ ಮಾಡುತ್ತಿದ್ದಾರೆ. ಇದರಿಂದ ಕೆಲಸಗಳನ್ನು ಸರಿಯಾಗಿ ಮಾಡರಾಗುವುದಿಲ್ಲ. ಇದನ್ನು ಕೈಬಿಡುವುದೊಳ್ಳೆಯದು ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ. ಇಂತಹ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕಿಂತ ಇವನ್ನು ಬೆಳಸದೇ ಇರುವುದು ಉತ್ತಮ ಎಂದು ನನಗನಿಸುತ್ತದೆ. ನೀರಾವರಿ ಬಗ್ಗೆ ಒಬ್ಬರು, ವ್ಯವಸಾಯ ಬಗ್ಗೆ ಒಬ್ಬರು ಹಾಗೇ ಇನ್ನೊಬ್ಬರು ಇನ್ನೊಂದು ಕೆಲಸಕ್ಕೆ ಎಂದು ಮಾಡುವುದು ಸರಿಯಲ್ಲ. ಸರಕಾರದ ಕಾನೂನಿನ ಪ್ರಕಾರ ಡೆವಲಪ್‌ಮೆಂಟು ಬ್ಯಾಂಕಿನಿಂದ ಎಲೆಕ್ಟ್ರಿಕ್ ಪಂಪುಸೆಟ್ಟುಗಳಿಗಾಗಿ ಸಾಲ ಕೊಡುವುದು, ಇರಿಗೇಷನ್‌ಗಾಗಿ ಸಾಲ ಕೊಡುವುದು, ಅಗ್ರಿಕಲ್ಚರಲ್ ಇಂಡಸ್ಟ್ರಿಯಲ್ ಕಾರ್ಪೊರೇಷನ್‌ನವರು ಟ್ರಾಕ್ಟರುಗಳಿಗಾಗಿ ಸಾಲ ಕೊಡುವುದು, ಪಂಪು ಸೆಟ್ಟುಗಳಿಗೆ ಸಾಲವನ್ನು ಬೇರೆ ಕಡೆ ಕೊಡುವುದು ಎಂದು ಮಾಡಿದರೆ ಒಂದಕ್ಕೊಂದು ಸಂಬಂಧವಿರುವುದಿಲ್ಲ. ಭೂ ಅಭಿವೃದ್ಧಿ ಬ್ಯಾಂಕನವರು ಪಂಪ್‌ಸೆಟ್ಟುಗಳನ್ನು ಹಂಚುವುದಕ್ಕೆ ಕಾರಣವೇನು ?

ಶ್ರೀ ಪಿ. ಎಂ. ನಾಡಗೌಡ.—ಭೂ ಅಭಿವೃದ್ಧಿ ಬ್ಯಾಂಕ್‌ನವರಮೂಲಕ ಪಂಪ್‌ಗಳನ್ನು ಹಂಚಿಸುವುದಕ್ಕೆ ಕಾರಣವಿಷ್ಟೆ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಭೂ ಅಭಿವೃದ್ಧಿ ಬ್ಯಾಂಕ್‌ನವರಿಗೆ ಸಾಲವಾಗಿ ಕೊಟ್ಟರೆ, ಅವರು ಡಿಬೆಂಚರ್ ಸಾಲವನ್ನು 4 ಕೋಟಿ ರೂಪಾಯಿಗಳಷ್ಟು ಜನರಿಂದ ಪಡೆದು ಖರ್ಚು ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಪಂಪ್‌ಸೆಟ್ಟುಗಳನ್ನು ಭೂ ಅಭಿವೃದ್ಧಿ ಬ್ಯಾಂಕ್ ಮೂಲಕ ಸರ್ಕಾರದವರು ಹಂಚುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ.

ಶ್ರೀ ಸಿ. ಬಂದೀಗೌಡ.—ಇನ್ನು ನೀರಾವರಿಯ ವಿಚಾರದಲ್ಲಿ ದೊಡ್ಡ ದೊಡ್ಡ ನದಿಗಳ ನೀರನ್ನು ಬಳಸಿಕೊಳ್ಳುವುದರ ಜೊತೆಗೆ ಚಿಕ್ಕಪುಟ್ಟ ತೊರೆಹಳ್ಳಗಳಿಗೂ ಸಣ್ಣ ಸಣ್ಣ ಜಲಾಶಯಗಳನ್ನು ನಿರ್ಮಿಸಿ ಹೆಚ್ಚಿನ ಜಮೀನಿಗೆ ನೀರಾವರಿ ಮಾಡಲು ಸುಸಂಘಟಿತ ಪ್ರಯತ್ನಗಳನ್ನು ಮಾಡರಾಗುತ್ತಿದೆಯೆಂದು ಹೇಳಿರುವುದು ಸಂತೋಷದ ವಿಚಾರ. ಈಗ ನಮ್ಮ ರಾಜ್ಯದಲ್ಲಿ ನೀರಾವರಿಯಾಗಿರತಕ್ಕ ಪ್ರದೇಶ ಶೇಕಡ 9 ಭಾಗ. ಎರಾ ದೊಡ್ಡ ದೊಡ್ಡ ನದಿಗಳ ನೀರನ್ನು ನಾವು ಬಳಸಿಕೊಂಡರೆ ಕಾಲು ಭಾಗಕ್ಕಿಂತಲೂ ಹೆಚ್ಚು ಜಮೀನಿಗೆ ನೀರನ್ನು ಬಳಸಿಕೊಳ್ಳುವುದು ಸಾಧ್ಯವಿಲ್ಲವೆಂಬ ನಿರೀಕ್ಷೆಯಿದೆ. ಈಗಿರುವಲ್ಲಿ ಬಹು ಭಾಗಕ್ಕೆ ನೀರನ್ನು ಒದಗಿಸಿಕೊಳ್ಳಬೇಕಾದರೆ ಸಣ್ಣಪುಟ್ಟ ನೀರಾವರಿ ಕಾಮಗಾರಿಗಳಿಂದ ಮತ್ತು ಪಂಪ್ ಸೆಟ್ಟುಗಳಿಂದ ಮಾತ್ರ ಸಾಧ್ಯ. ಎರಾ ಕಡೆಗಳಲ್ಲೂ ಪಂಪ್‌ಸೆಟ್ಟುಗಳನ್ನು ಹಾಕಬೇಕಾದರೆ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳಬೇಕಾಗುತ್ತದೆ. ಕೊಳವೆ ಬಾವಿಗಳನ್ನು ಸಹ ಸಾಕಷ್ಟು ತೆಗೆಸಬೇಕಾಗಿದೆ. ಈ ಕೆಲಸಗಳು ತ್ವರಿತವಾಗಿ ನಡೆಯಬೇಕಾಗಿವೆ. ಈ ಬಾಬುಗಳಿಗೆ ಸರ್ಕಾರದವರು ಎಷ್ಟು ಹಣ ಖರ್ಚು ಮಾಡಿದರೂ ಸಾಲದು. ಇದುವರೆಗೆ ನಡೆದಿರುವ ಕೆಲಸಕಾರ್ಯಗಳು ಸಾಲದು. ನೀರಾವರಿ ಕಾಮಗಾರಿಗಳಿಗೆ ಮತ್ತು ಕೊಳವೆ ಬಾವಿಗಳಿಗೆ ಸರ್ಕಾರದವರು ಇನ್ನೂ ಹೆಚ್ಚು ಹಣವನ್ನು ಒದಗಿಸಿ ದೇಶದಾದ್ಯಂತ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ಸಮಯಕ್ಕೆ ಕೃಷ್ಣಾ ನದಿ ನೀರಿನ ಬಗ್ಗೆ ಏನು ಒಂದು ವಿವಾದ ಪ್ರಾರಂಭವಾಗಿದೆ, ಇದನ್ನು ಸಮರ್ಪಕವಾದಂತಹ ರೀತಿಯಲ್ಲಿ ಬಗೆಹರಿಸುವುದಕ್ಕೆ ಸರ್ಕಾರದವರು ಕಾರ್ಯಕ್ರಮ ಕೈಕೊಳ್ಳಬೇಕು. ಶಾಸನಸಭೆಯಲ್ಲಿ ಸದಸ್ಯರುಗಳು ತಮಗಿರುವ ಕಳವಳವನ್ನು ಅನೇಕ ಸಂದರ್ಭಗಳಲ್ಲಿ ವ್ಯಕ್ತಪಡಿಸಿದ್ದಾರೆ. ಈ ನದೀ ನೀರಿನ ಬಗ್ಗೆ ನಮ್ಮ ರಾಜ್ಯಕ್ಕೆ ಅನ್ಯಾಯವಾಗದ ರೀತಿ ಈ ರಾಜ್ಯದ ಹಿತವನ್ನು ಸರ್ಕಾರದವರು ಕಾಪಾಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ವಿದ್ಯುಚ್ಛಕ್ತಿಯ ವಿಷಯದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕಾಳೀ ನದಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೃಷ್ಣಾ ನದಿಯ ಅಣೆಕಟ್ಟು ಕಟ್ಟುವ ವಿಚಾರದಲ್ಲಿ ನಾನು ಎಷ್ಟು ಆಸಕ್ತಿಯುಳ್ಳವನಾಗಿದ್ದೇನೋ ಅದರ ನೂರನೇ ಒಂದು ಪಾಲಷ್ಟು ಆಸಕ್ತಿಯನ್ನು ಈ ಕಾಳೀ ನದಿಯ ಯೋಜನೆ ಬಗ್ಗೆ ಹೊಂದಿಲ್ಲ. ಕಾರಣವಿಷ್ಟೆ ; ವಿದ್ಯುಚ್ಛಕ್ತಿಯನ್ನು ಯೋಜನೆಗಳನ್ನು ಪ್ರಾರಂಭ ಮಾಡಬೇಕಾದರೆ, ವಿದ್ಯುಚ್ಛಕ್ತಿ ಉತ್ಪಾದನೆಗೆ ಎಷ್ಟು ವೆಚ್ಚವಾಗುತ್ತದೋ ಅದರ ಹತ್ತರಷ್ಟು ಆ ವಿದ್ಯುಚ್ಛಕ್ತಿಯನ್ನು ಬಳಸಲು ಖರ್ಚಾಗುತ್ತದೆಂದು ಹಿಂದೆ ಮಾನ್ಯ ಅರ್ಥ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ.

(ಶ್ರೀ ಸಿ. ಬಂಡೀಗೌಡ)

ಅದರ ಬಗ್ಗೆ ಉದಾಹರಣೆಯನ್ನು ಕೊಡುತ್ತಾ, ಶರಾವತಿ ಯೋಜನೆಗೆ 100 ಕೋಟಿ ರೂಪಾಯಿಗಳು ಖರ್ಚಾದರೆ, ಅಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಬಳಸಲು 1000 ಕೋಟಿ ರೂಪಾಯಿ ಖರ್ಚು ಬರುತ್ತದೆಂದು ಹೇಳಿದರು. ಉತ್ಪತ್ತಿಯಾದ ವಿದ್ಯುಚ್ಛಕ್ತಿಯನ್ನು ಬಳಸಲು ನಾನಾ ರೀತಿಯ ತೊಂದರೆಗಳಿವೆ ಎನ್ನುವುದು ನಮಗೆ ಗೊತ್ತಿದೆ. ಸಾಕಷ್ಟು ಕಂಬಗಳು, ತಂತಿ ಮುಂತಾದ ಸಲಕರಣೆಗಳು ನಮ್ಮಲ್ಲಿ ಇಲ್ಲ. ನಮ್ಮಲ್ಲಿರುವ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವ ಸಂಬಂಧದಲ್ಲಿ ಮುಂಬಯಿ ಕಲ್ಕತ್ತಾ ಮತ್ತು ಇತರ ರಾಜ್ಯಗಳಿಂದ ಉದ್ಯಮಿಗಳನ್ನು ಸರ್ಕಾರದವರು ನಾನಾ ಸೌಲಭ್ಯಗಳನ್ನು ಕೊಡುವ ಮೂಲಕ ಆಹ್ವಾನಿಸಿದ್ದಾರೆ. ಹೊರಗಿನವರನ್ನು ನಮ್ಮ ರಾಜ್ಯದಲ್ಲಿ ಉದ್ಯಮಗಳನ್ನು ಸ್ಥಾಪಿಸಲು ಆಹ್ವಾನಿಸುವುದು ಸರಿಯಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮಲ್ಲಿ ಉದ್ಯಮಗಳನ್ನು ಸ್ಥಾಪಿಸುವವರು ಇಲ್ಲವಿದ್ದರೆ ಇನ್ನೂ 10 ವರ್ಷಗಳು ಬೇಕಾದರೆ ಕಾಯೋಣ. ಆದರೆ ಹೊರಗಿನವರನ್ನು ಆವಲಂಬಿಸುವುದು ಸರಿಯಲ್ಲ. ನಮ್ಮ ರಾಜ್ಯದಲ್ಲಿ ಇನ್ನೂ 4 ವರ್ಷ ಕಾಲ ಹೊಸ ಉದ್ಯಮಗಳನ್ನು ಸ್ಥಾಪಿಸದಿದ್ದರೆ ನಮ್ಮ ರಾಜ್ಯವೇನೂ ಹಾಳಾಗುವುದಿಲ್ಲ. ನಮ್ಮ ಉದ್ಯಮಗಳನ್ನು ನಾವೇ ಸ್ಥಾಪಿಸಿಕೊಳ್ಳುವುದು ಒಳ್ಳೆಯದು. ವಿದ್ಯುಚ್ಛಕ್ತಿ ನಮ್ಮಲ್ಲಿ ಈಗ ಹೆಚ್ಚಾಗಿದೆಯೆಂದು ಬೇರೆಯವರಿಗೆ ನಮ್ಮಲ್ಲಿ ಉದ್ಯಮಗಳನ್ನು ಸ್ಥಾಪಿಸಲು ಅವಕಾಶ ಕೊಡುವುದು ಬೇಡ. ಸದ್ಯಕ್ಕೆ 100, 200, 300 ಕೋಟಿ ಖರ್ಚಾಗುವ ಯೋಜನೆಗಳನ್ನು ಪ್ರಾರಂಭ ಮಾಡುವುದನ್ನು ಕೈಬಿಡುವುದು ಒಳ್ಳೆಯದು. ಏಕೆಂದರೆ 5 ವರ್ಷಕ್ಕೆ ಹೋಗಿ ಈಗ ವರ್ಷ ವರ್ಷ ಯೋಜನೆಗಳನ್ನು ಕೈಕೊಳ್ಳುವ ಪರಿಸ್ಥಿತಿಗೆ ಬಂದಿದ್ದೇವೆ. ಕಳೆದ ವರ್ಷ 4 ನೇ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು 530 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬ ಅಂದಾಜಿತ್ತು. ಅದರೆ ಕಳೆದ ಸಾಲಿನಲ್ಲಿ 60 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಲಾಯಿತು. ಈ ವರ್ಷವೂ ಸಹ 60 ಕೋಟಿ ರೂಪಾಯಿಗಳ ಯೋಜನೆಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಅಂದರೆ 5 ವರ್ಷಕ್ಕೆ 300 ಕೋಟಿ ರೂಪಾಯಿಗಳಾಯಿತು. ಇನ್ನು ಮುಂದೆ ಸರ್ಕಾರದವರು ದೊಡ್ಡ ದೊಡ್ಡ ಯೋಜನೆಗಳ ಕನಸನ್ನು ಬಿಡುವುದು ಒಳ್ಳೆಯದು. ಶೀಘ್ರ ಫಲವನ್ನು ಕೊಡುವ ಯೋಜನೆಗಳನ್ನು ಕಟ್ಟುವುದು ಒಳ್ಳೆಯದು.

ಇನ್ನು ನೀರು ಸರಬರಾಜಿನ ಬಗ್ಗೆ ಹೇಳಬೇಕಾದರೆ, ಗ್ರಾಮಾಂತರ ಪ್ರದೇಶಗಳ ಜನರಿಗೆ ಎಷ್ಟರಮಟ್ಟಿನ ಸೌಕರ್ಯಗಳನ್ನು ಒದಗಿಸಿಕೊಡಬೇಕಾಗಿತ್ತೋ ಅಷ್ಟನ್ನು ಒದಗಿಸಿಕೊಟ್ಟಿಲ್ಲ ಎನ್ನುವ ಅಭಿಪ್ರಾಯಕ್ಕೆ ಬರಬೇಕಾಗಿದೆ. ಕುಡಿಯುವ ನೀರಿನ ಸೌಕರ್ಯವನ್ನೂ ಸಹ ಸರಿಯಾಗಿ ಮಾಡಿಲ್ಲ. ಮೊನ್ನೆ ಶ್ರೀಮಾನ್ ಕುಬ್ಸದ್ ಅವರು ಮಾತನಾಡುತ್ತಾ, ಬೆಂಗಳೂರಿನಲ್ಲಿ ಹಾಲಿನ ಡೈರಿ ಇಟ್ಟು ಎಲ್ಲರಿಗೂ ಹಾಲನ್ನು ಹಂಚುವಂತೆ ಬೇರೆ ಕಡೆಗಳಲ್ಲೂ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಅಂದರೆ ನಾನು ಗ್ರಾಮಾಂತರ ಪ್ರದೇಶಗಳಿಗೆ ಸರ್ಕಾರದವರು ಹಾಲನ್ನು ಹಂಚುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿಲ್ಲ, ಎರ್ನಾ ಹಳ್ಳಿಗಳಿಗೂ ಕಡಿಯುವ ನೀರನ್ನಾದರೂ ಒದಗಿಸುವ ವಿಷಯವನ್ನು ಸರ್ಕಾರದವರು ಜಾಗ್ರತೆ ಮಾಡಬೇಕಾಗಿದೆ. ಮೂರು ವರ್ಷಗಳ ಹಿಂದೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಲು 24 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿದ್ದೇವೆಂದು ಹೇಳಿದ್ದರು. ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಈ ರೀತಿ ತಿಳಿಸಿದ್ದಾರೆ.

> "ಕುಡಿಯುವ ನೀರಿನ ಬಾವಿಯಿಲ್ಲದ ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ಬಾವಿಯೊದಗಿಸಬೇಕೆಂದು ಸರ್ಕಾರದವರು ತೀರ್ಮಾನ ಕೈಕೊಂಡಿದ್ದಾರೆ. ಅನೇಕ ಬಾವಿಗಳನ್ನು ತೋಡಿಸಲು ಮಂಜೂರಾತಿ ನೀಡಲಾಗಿದೆ. ಈ ಯೋಜನೆ ಕಾರ್ಯಗತವಾಗುತ್ತಿದೆ. ಇದರಿಂದ, ಕೆಲವೇ ವರ್ಷಗಳಲ್ಲಿ, ನಮ್ಮ ರಾಜ್ಯದೊಳಗೆ ಕುಡಿಯುವ ನೀರಿನ ಸೌಲಭ್ಯವಿಲ್ಲದ ಗ್ರಾಮವೇ ಇಲ್ಲವೆಂದಾಗುವ ಹಾರೈಕೆಯಿದೆ"

24 ಕೋಟಿ ರೂಪಾಯಿಗಳ ಯೋಜನೆ ಹೋಗಿ ಈಗ ಈ ರೂಪಕ್ಕೆ ಬಂದಿದ್ದಾರೆ. ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿವೆ. ಇಲ್ಲದೇ ಇರುವಂತಹ ಹಳ್ಳಿಗಳಿಗೆ ಬಾವಿಗಳನ್ನು ಒದಗಿಸಲು ಇನ್ನೂ ಕೆಲವಾರು ವರ್ಷಗಳು ಬೇಕಾಗಬಹುದೆಂದು ಕಾಣುತ್ತದೆ. ಗ್ರಾಮಾಂತರ ಪ್ರದೇಶಗಳಿಗೆ ನೀರನ್ನು ಒದಗಿಸುವ ವಿಷಯದಲ್ಲಿ ಸರ್ಕಾರದವರು ಒಂದೊಂದು ವರ್ಷ ಒಂದೊಂದು ನೀತಿಯನ್ನು ಅನುಸರಿಸುವುದು ಮುರ್ಖತೆ ತರುವ ವಿಷಯವಲ್ಲ.

ಇನ್ನು ಕುಟುಂಬ ಯೋಜನೆಯ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಉಚ್ಚ ಪ್ರಮಾಣದಲ್ಲಿ ನೋಡಿದರೆ, ಈ ಯೋಜನೆಯು ಬಹಳ ತೀವ್ರ ಗತಿಯಲ್ಲಿ ನಡೆಯುತ್ತಿದೆಯೆಂಬುದು ಗೊತ್ತಾಗುತ್ತದೆ. ಖರ್ಚಿನ ದೃಷ್ಟಿಯಲ್ಲಿ ನೋಡಿದರೆ, ಪ್ರತಿವರ್ಷ ನರಾನರಿ 14 ಲಕ್ಷ ರೂಪಾಯಿ ವೆಚ್ಚವಾಗುತ್ತಿದ್ದಿತು; 1966-67 ರಲ್ಲಿ 96.3 ಲಕ್ಷ ರೂಪಾಯಿ ವೆಚ್ಚವಾಗಿದೆ ಪ್ರಸಕ್ತ ವರ್ಷದಲ್ಲಾದರೋ 142 ಲಕ್ಷ ರೂಪಾಯಿ ವೆಚ್ಚವಾಗುವ ನಿರೀಕ್ಷೆಯಿದೆ. ಕುಟುಂಬ ಯೋಜನಾ ಕಾರ್ಯಗತಿಯು ಇನ್ನಷ್ಟು ತ್ವರಿತವಾಗಿ ನಡೆಯಬೇಕೆಂದು ನಿರ್ಧರಿಸಿರುವುದರಿಂದ, 1968-69ರಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 223 ಲಕ್ಷ ರೂಪಾಯಿ ವೆಚ್ಚವಾಗುವುದೆಂದು ಸರ್ಕಾರದವರು ಅಂದಾಜು ಮಾಡಿದ್ದಾರೆ. ಮೊನ್ನೆ ಶ್ರೀ ಎಂ. ಪಿ. ಎರ್. ಶಾಸ್ತ್ರಿಯವರು ಈ ಬಗ್ಗೆ ಮಾತನಾಡುತ್ತಾ ಬಹಳ ಟೀಕಿಸಿದರು. ಅವರು ಮಡಿವಂತರು, ಆಚಾರವಂತರು, ಉಚ್ಚವರ್ಗಕ್ಕೆ ಸೇರಿದವರು, ಅವರು ಈ ಯೋಜನೆಗೆ ಒಳಪಡುವುದು ಬೇಡ, ಅವರಿಗೆ ಇನ್ನೂ 10 ಮಕ್ಕಳಾಗಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಯೋಜನೆಯನ್ನು ಸರ್ಕಾರದವರು ಇಂತಹವರಿಗೆ ಮಾಡಿಲ್ಲ ಯಾರ ಜನಸಂಖ್ಯೆ ಲಕ್ಷ ಲಕ್ಷಗಟ್ಟಲೆ ಹೆಚ್ಚುತ್ತಿದೆಯೋ, ಯಾವ ಜನಕ್ಕೆ ಈ ದೇಶದಲ್ಲಿ ಮುಂದೆ ಭವಿಷ್ಯವಿಲ್ಲವೋ ಅಂತಹವರಿಗಾಗಿ ಈ ಯೋಜನೆಯಿರುವುದು. ಈ ಯೋಜನೆಯಶಸ್ವಿಯಾಗದ ಹೊರತು ಬಡತನ, ಹಸಿವು, ನಿರುದ್ಯೋಗ ಕಡಿಮೆಯಾಗುವುದಿಲ್ಲ. ಈಗ ಹೆಂಡದ ಅಂಗಡಿಗಳು ಮತ್ತೆ ಪ್ರಾರಂಭವಾಗಿವೆ. ಕೆಳಮಟ್ಟದ ಜನರಿಗೆ, ವಿದ್ಯೆಯಿಲ್ಲದ ಜನರಿಗೆ ಅವರ ಭಾಷೆಯಲ್ಲಿ, ಅವರಿಗೆ ಗೊತ್ತಾಗುವ ರೀತಿಯಲ್ಲಿ ಈ ಯೋಜನೆಯ ಪ್ರಚಾರ ಕಾರ್ಯವನ್ನು ನಡೆಸಬೇಕಾಗಿದೆ. ಅದುದರಿಂದ ಸಾಹಿತ್ಯದಲ್ಲಿ ಪಂಡಿತರ ಸಾಹಿತ್ಯ ಪಾಮರರ ಸಾಹಿತ್ಯ ಹಾಗೂ ಸಂಸ್ಕೃತ ಸಾಹಿತ್ಯ ಇದನ್ನು ಶಾಸ್ತ್ರೀಯವಾಗಿ ವಿಚಾರ ಮಾಡುವುದು ಬೇರೆ ವಿಷಯ. ಆದರೆ ಇಂದು ಹಳ್ಳಿಗಳಲ್ಲಿ ಕೆಲಸ ಮಾಡತಕ್ಕಂಥ ಅನಕ್ಷರಸ್ಥ ಜನರಿಗೆ ತಿಳಿಯುವ ಹಾಗೆ ಸಾಹಿತ್ಯ ಒದಗಿಸಿ ಪ್ರಚಾರ ಮಾಡುವುದು ಬೇರೆ ವಿಷಯ. ಅವರಿಗೆ ತಿಳಿಯುವ ಹಾಗೆ ಪ್ರಚಾರ ಕಾರ್ಯ ಮಾಡಿದರೆ ಜನಗಳಿಗೆ ಉಪಯೋಗವಾಗುತ್ತದೆ. ಈ ಕಾರ್ಯವನ್ನು ಹೆಲವಾರು ಅಧಿಕಾರಿಗಳಿಗೆ ವಹಿಸಿಕೊಟ್ಟು ಲಕ್ಷಾಂತರ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವಾಗ ಜನರ ಅವಶ್ಯಕತೆಯ ಕಡೆಗೆ ಗಮನ ಕೊಡತಕ್ಕಂಥ ಹೊಣೆ ಹೊತ್ತಂಥ ಅಧಿಕಾರಿಗಳನ್ನು ನಿಯೋಗ ಮಾಡಿ ಈ ಕೆಲಸ ಚೆನ್ನಾಗಿ ನಡೆಸಬೇಕು ಎಂದು ವಿನಂತಿ ಮಾಡುತ್ತೇನೆ.

ಇನ್ನು ಮಹಾಜನ್ ಆಯೋಗದ ವರದಿ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಹೇಳಿದ್ದಾರೆ. ಕಚ್ ರಣಭೂಮಿಯ ಗಡಿ ಪ್ರದೇಶದಲ್ಲಿ ಇರತಕ್ಕ ಗಡಿ ವಿವಾದದಬಗ್ಗೆ ಅಂತರರಾಷ್ಟ್ರೀಯ ನ್ಯಾಯ ಮಂಡಲಿಯು ಕೊಟ್ಟಿರುವ ತೀರ್ಪನ್ನು ನಿರಾಕರಿಸಿದರೆ ನಮಗೆ ಗೌರವ ಬರುವುದಿಲ್ಲ, ಅದನ್ನು ಒಪ್ಪಿಕೊಳ್ಳಬೇಕಾಗಿದೆ ಎಂದು ಪ್ರಧಾನಿಗಳು ಹೇಳಿದ್ದಾರೆ. ರಾಜಕೀಯ ಗೌರವ ಕಾಪಾಡುವ ವಿಚಾರದಲ್ಲಿ ಈ ರೀತಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಹೊರಗಿನವರ ತೀರ್ಪನ್ನು ಒಪ್ಪಿಕೊಳ್ಳಬೇಕು ಎಂದು ಹೇಳತಕ್ಕಂಥ ಕೇಂದ್ರ ಸರಕಾರ ನಮ್ಮ ದೇಶದ ಶ್ರೇಷ್ಠ ನ್ಯಾಯಾಲಯದ ನಿವೃತ್ತ ಶ್ರೇಷ್ಠ ನ್ಯಾಯಾಧೀಶರು ಕೊಟ್ಟರತಕ್ಕ ನಮ್ಮ ರಾಜ್ಯದ ಗಡಿ ಬಗ್ಗೆ ತೀರ್ಪನ್ನು ಯಾವುದೇ ಒಂದು ಒತ್ತಡಕ್ಕೆ ಪ್ರಭಾವಕ್ಕೆ ಒಳಗಾಗದೆ ಒಪ್ಪಿಕೊಳ್ಳತಕ್ಕದ್ದು ನ್ಯಾಯವಾದುದು. ಅವರು ಕೊಟ್ಟಿರತಕ್ಕಂಥ ತೀರ್ಪಿನ ಬಗ್ಗೆ ಬೇರೆ ನಿಲುವನ್ನು ತಳೆಯುವುದು ಸರಿಯಲ್ಲ. ಆದುದರಿಂದ ಮಹಾಜನ್ ಕಮಿಷನ್ ವರದಿಯನ್ನು ಭಾರತ ಸರಕಾರದವರು ಸಂಪೂರ್ಣವಾಗಿ ಒಪ್ಪಿಕೊಂಡು ಈ ಗಡಿ ಸಮಸ್ಯೆಯನ್ನು ಬಗೆಹರಿಸುತ್ತಾರೆ ಮತ್ತು ಮೈಸೂರಿಗೆ ನ್ಯಾಯ ದೊರಕುತ್ತದೆ ಎಂದು ಹೇಳುತ್ತೇನೆ. ಕೊನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟಿರುವ ಅಧ್ಯಕ್ಷರನು ವಂದಿಸಿ ನನ್ನ ಈ ಎರಡು ಮಾತು ಮುಗಿಸುತ್ತೇನೆ. ನಮಸ್ಕಾರ.

Sri R. B. NAIK (Legislative Assembly Constituency).—Mr. Chairman, Sir, I have stood up to support the Motion of Thanks moved by the Hon'ble Member Sri Adiga with certain observations of mine. The address of the Governor, as suggested by previous speakers, appears to be unemotional or analytical survey of the past achievements with a firm belief in a bright future.

At the outset, the address rather impliedly and euphimistically suggests that the country cannot afford the differences between the political parties on the basic design of development and so appeals to the

(SRI R. B. NAIK)

Hon'ble Members of this House and the other House and to the people outside that a better understanding on the part of people should back the Governmental efforts in its implementation of the policies and programmes of development.

I can say that on the question of law and order a sense of regret permeates throughout the pertinent portion of his speech because of the exploitation of student unrest in connection with the language issue. This issue was taken advantage of by some anti-social elements. The apprehension felt by the student world in the several parts of Southern India is not unfounded according to me because the Language Act together with the resolution created a sort of suspicion in the minds of the student world, especially in Southern India and they bona fide believed that this Language Act and the resolution might operate as a retrograde instrument against their interest, more so on the student world in the southern part of India. Anyhow, it is after all a controversial matter on which unanimity of opinion has not been secured till today. Therefore, it is no use saying that the students did that and did this because they had their own apprehensions. If we were in their position, I think we would have felt in the same way because the full implications of the Language Act and the resolution were not understood in all its details by a certain section of the community. Taking advantage of student unrest, the anti-social elements ran amuck. Such anti-social activities always result in distortion of economy and the unhealthy tendencies they release, go to undermine the fabric of political and social life of the country and it has got its own corrupting influence which poses a threat to the security of the nation. There have been some disturbances and violent disturbances. This cannot be solely attributed to the student world. No doubt, they set the ball in motion and when it was just about to gain momentum, other elements came forward, took advantage of the situation and began to indulge in arson, incendiarism and what not. Therefore, according to me, it is no use blaming the students only for all the consequences that followed.

Then, the Governor in his address has referred to planning. There is a reference to the annual plan of 1968-69. We all know that planning is resorted to secure a higher rate of growth and that our resources are also limited in material, skill and technical know-how. The Government have also accepted the concept of planned development which has for its aim the reduction of disparities in income and eliminating concentration of wealth and means of production, to the common detriment. So far as the plan for 1968-69 is concerned, the Planning Commission has suggested some guide lines for its formulation. I do not want to dilate upon these guide lines. I may, however, mention one or two because the important basic objective of this plan is to secure stability of prices as far as possible and also to secure a flourishing rate of growth without creating inflationary pressures. They have again suggested that in

formulating this Plan the Government or the planners should take into account the spill-over expenditure to honour the commitments already made. They have further suggested that in the matter of irrigation projects top priority should be given to those projects which are under advanced stage of construction and projects on which the expenditure so far incurred is so small compared to the total cost can be defined. I think the planners, in framing this Plan for the year 1968-69, might have taken all these considerations into account.

About agriculture, one expert stated that agriculture in India has been a long-drawn question from crop to crop despite the fact that we have immense irrigation potential and vast track of land. Unfortunately, bad weather is confronting us during the past three years of the Third Plan and the agricultural output has not risen tremendously. It is a fact that bad weather might be one of the factors behind the stagnation in the field of production. Of course, Government have taken up some measures, they have their own rules and machinery. The question is whether we are satisfied in a regular way in the implementation of all the policies. I think, Government have not taken all the necessary steps in this direction, with a sense of purpose to stimulate the agricultural sector into a dynamic growth. The villagers have not been appraised of these potentialities of scientific farming; because there is no proper transmission of the results of experments between the farmer of one corner and the other. I also feel that the result of all the experiments are not transmitted by effective means. So, we have not been able to create an economic atmosphers through a rational price policy. I don't say that the Government has not done anything. But, according to me, there is no sense of purpose, there is no enthusiasm on the part of the machinery to co-operate and educate the rural agriculturists on their policies on agriculture. I would have been happy if there was a slight reference in the Address to Kharland problems. It is a big problem in North Kanara and South Kanara Districts. It is a scheme or a device intended to stop or reduce the inundation of salt into the paddy fields, by the construction of adequate and strong embankments. These are the problems which are confronting only South Kanara and North Kanara Districts in the whole of Mysore State. If we take the coastal line of North Kanara, I think, there are 17,000 acres of land under cultivation. Unfortunately, ofter the coming into force of the Bombay Tenancy Agricultural Act of 1948 all these 17,000 acres are not under cultivation, because this land is by the side of the coastal line wherefrom the sea water flows in the fields and damage the crop. When we were in Bombay, by the Tenancy Act either the land lord did not countenance the idea of putting up bunds, it was an ill-luck of the tenants. The tenants had no initiative or interest to invest on the repair of the bunds, because they could not afford to invest capital on the repair of the embankments. With the result the bunds that were there since time immemorial were brought to the ground level and all these 17,000 acres of land is under water. I was also a member of the

(SRI R. B. NAIK)

Legislative Assembly in Bombay, I tried my level best and a legislation was brought on the Statute Book, viz., Kharland Act. Unfortunately, it could not work well for some reason or the other and it was kept in cold storage till the reorganisation. Fortunately, when we came to Mysore State, we were able to secure the support of the Government. Government has already initiated the scheme and some portion of the land is brought under cultivation. There is still much to be done, and I think, the Government will take necessary steps to see that the scheme is fortified by bringing all the 17,000 acres of land along the coastal line from Karwar to Bhatkal. If this is done, I am sure the food problem will be solved to agreat extent, we will be able to send foodgrains to Goa and other places, as was done previously. I earnestly request the Government to take necessary steps in this behalf immediately.

Further I think, there is no reference in the Address of the Governor to certain important subjects like Community Development and Panchayath and Taluk Boards. They are all very important because we are clamouring for decentralisation of administration. But not even a sentence has been incorporated in the Addres and so also about this small scale industries. When we are mobilising the support of these village organisations, which are the spadehead of the developmental activities in the rural areas, they cannot be ignored. We want the support of these Institutions. They are the instruments through which the productivity of our village projects should be implented. In regard to large scale industries, the Government have given various incentives to new entrepreneurs like exemption from octroi, sales tax, with the result so many industries are coming up. So far as small scale industries are concerned, I think, the Government must give more attention to these small scale industries and they should not be looked upon as strategic point of economy and they should be progressive and effective decentralised sector integrated to agriculture on one hand and larger Scale industries on the other.

Further, I want to congratulate the Government on the development of fisheries in South Kanara and North Kanara. It is a marine deep sea fishing. This question mainly relate to South and North Kenara districts. There may be inland fisheries in old Mysore and in Gulbarga. I do LOT know much about inland fisheries. I think the Government has done a lot and a maximum possible benefit can be derived from the implementation of the schemes introduced now.

About the findings of the Mahajan Commission's report, different people are having different opinions. Mrs. Indira Gandhi, the Prime Mininster of India, has said that the award of the International Tribunal relating to Kutchrann Border should be honoured. If this award is honoured, why Mahajan Comminision Report should not be honoured ? I cannot understand this argument. This causes a suspecion

in the minds of the people. At the instance of Central Government the Mahajan Commission was appointed. When this Commission was appointed, the award given by it should also be accepted by it *in toto*. There was an unanimous opinion on the floor of this House and also the other House that the award should be implemented *in toto*. We cannot act on the whims and fancies of some of the leaders. Therefore, in all possible way, we must urge that the Mahajan Commission's report should be accepted *in toto*. With these few words, I support the motion of thanks and I am thankful to the Chair for having given me an opportunity to speak.

† ಶ್ರೀ ವಿಶ್ವನಾಥಸ್ವಾಮಿ (ಸ್ಥಾನೀಯ ಪ್ರಾಧಿಕಾರಿ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ಉಭಯ ಸದನದ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣವನ್ನು ಸ್ವಾಗತಿಸುತ್ತಾ ಸನ್ಮಾನ್ಯ ಸದಸ್ಯರಾದ ಸೂರ್ಯನಾರಾಯಣ ಅಡಿಗಾರವರು ಈ ಸಭೆಯಲ್ಲಿ ರಾಜ್ಯಪಾಲರನ್ನು ಅಭಿನಂದಿಸಲು ತಂದಿರುವ ಗೊತ್ತುವಳಿಯನ್ನು ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ರಾಜ್ಯಪಾಲರು ನಮ್ಮ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ವಿಚಾರವನ್ನು ಹೇಳುತ್ತಾ ಭಾಷೆಯ ವಿಷಯದಲ್ಲಿ ವಿದ್ಯಾರ್ಥಿಗಳು ಮಾಡಿದ ಗಲಭೆಯನ್ನು ವಿವರಿಸಿದ್ದಾರೆ. ಈ ವಿಷಯದಲ್ಲಿ ಮಾತನಾಡುತ್ತಾ ಕೆಲವು ಸದಸ್ಯರು ಲಾ ಅಂಡ್ ಆರ್ಡರನ್ನು ಕಾಪಾಡಲು ಸರ್ಕಾರದವರು ಎಷ್ಟು ಕ್ರಮ ಕೈಕೊಳ್ಳಬೇಕಾಗಿತ್ತೋ ಅಷ್ಟನ್ನು ಕೈಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎಂದು ಆಪಾದನೆ ಮಾಡಿದ್ದಾರೆ. ಯಾವುದೇ ಒಂದು ಭಾಷೆ ವಿಷಯದಲ್ಲಾಗಲೀ ಅಥವಾ ಇನ್ನಿತರ ಸಮಸ್ಯೆ ವಿಷಯದಲ್ಲಾಗಲಿ ವಿದ್ಯಾರ್ಥಿಗಳು ವಿರೋಧ ವ್ಯಕ್ತಪಡಿಸಿದ್ದನ್ನು ನಾನು ವಿರೋಧಿಸುತ್ತೇನೆ. ವಿದ್ಯಾರ್ಥಿಗಳು ತಮ್ಮ ವಿರೋಧವನ್ನು ಯಾವ ರೀತಿಯಲ್ಲಿ ವ್ಯಕ್ತಮಾಡಬೇಕಾಗಿತ್ತೋ ಆ ಮಾರ್ಗದಲ್ಲಿ ವ್ಯಕ್ತಮಾಡಿದ್ದರೆ ಒಪ್ಪಬಹುದಾಗಿತ್ತು. ಅವರು ಹಿಂಸಾತ್ಮಕ ರೀತಿಯಲ್ಲಿ ವಿರೋಧ ವ್ಯಕ್ತಪಡಿಸಿರುವುದರಿಂದ ಅದನ್ನು ಖಂಡಿಸುವುದು ಸಂಪ್ರದಾಯವಾಗಿದೆ. ಕೆಲವರು ಈ ಸಂಬಂಧದಲ್ಲಿ ಧೂಷಣೆಗೆ ಒಳಗಾಗಿದ್ದಾರೆ. ಇದಕ್ಕೆ ತಂದೆತಾಯಿಗಳು ಮತ್ತು ಬಾಲಕರೂ ಕೂಡ ಜವಾಬ್ದಾರರು—ಎಂದು ಕೆಲವರು ಹೇಳಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಇದಕ್ಕೆ ಕಾರಣರು ನಮ್ಮ ಮುಂದಾಳುಗಳು ಮತ್ತು ನಾಯಕರು ಎಂದು ನಾನು ಹೇಳುತ್ತೇನೆ. ಏಕೆಂದರೆ ಹಿಂದೆ ವಿರೋಧ ವ್ಯಕ್ತಪಡಿಸುವವರೆಗೂ ಚಳವಳಿ ಮಾಡುವವರೆಗೂ ಪರಿಹಾರ ದೊರೆಯುವುದಿಲ್ಲ ಎಂಬುದು ಜನತೆಗೆ ಗೊತ್ತಾಗಿದೆ. ಆ ರೀತಿ ನಾಯಕರು ಮಾರ್ಗದರ್ಶನ ಮಾಡಿದ್ದಾರೆ. ಆಂಧ್ರ ಪ್ರದೇಶ ಅಥವಾ ಭಾಷಾವಾರು ಪ್ರಾಂತ್ಯ ರಚನೆಯಾಗುವಾಗ ಪೊಟ್ಟಿ ಶ್ರೀರಾಮುಲು ಮರಣಹೊಂದಿದನಂತರವೇ ಚಳವಳಿಗಾರರ ಉದ್ದೇಶ ನೆರವೇರಿತು, ಹಿಂಸಾತ್ಮಕ ಚಳವಳಿ ನಡೆದ ನಂತರವೇ ಕೇಂದ್ರ ಗಮನ ಕೊಟ್ಟಿತು, ಆಂಧ್ರ ಪ್ರದೇಶ ರಚನೆಯಾಯಿತು. ಭಾಷಾವಾರು ತತ್ವದಮೇಲೆ ನೆಹರೂರವರ ಕಾಲದಲ್ಲಿ ರಾಜ್ಯಗಳ ಪುನರ್ವಿಂಗಡೆಯಾಯಿತು. ಇದೇ ರೀತಿಯಲ್ಲಿ ಮಹಾರಾಷ್ಟ್ರದಲ್ಲೂ ಕೂಡ ಚಳವಳಿಯಾಯಿತು. ಬೆಳಗಾಂ ಪ್ರದೇಶದ ವಿಷಯದಲ್ಲಿ ಮೂರು ಸಲ ಕಮಿಷನ್ ಮಾಡಿದ ಮೇಲೆ ಬೆಳಗಾಂ ಮೈಸೂರು ರಾಜ್ಯದಲ್ಲೇ ಇರಬೇಕು ಎಂದು ತೀರ್ಮಾನವಾದಮೇಲೆ ಕೂಡ ಭಾರತ ಸರ್ಕಾರ ಮಹಾರಾಷ್ಟ್ರದ ಚಳವಳಿಗೆ, ಒತ್ತಾಯಕ್ಕೆ ಮಣಿದು ಮತ್ತೊಂದು ಕಮಿಷನನ್ನು ರಚಿಸಿತು. ಆದರೂ ಕೂಡ ಇನ್ನೂ ಸರಿಯಾದ ಇತ್ಯರ್ಥವಾಗಿರುವುದಿಲ್ಲ. ಚಳುವಳಿಯಿಂದ ಉದ್ದೇಶ ಸಾಧನೆ ಮಾಡಿಕೊಳ್ಳಬಹುದೆಂಬುದಕ್ಕೆ ಇಂಥ ಅನೇಕ ನಿದರ್ಶನಗಳಿವೆ. ಲ್ಯಾಂಗ್ವೇಜ್ ಆಕ್ಟ್ ಜಾರಿಗೆ ಬಂದಮೇಲೆ ಪಾರ್ಲಿಮೆಂಟಿನಲ್ಲಿ ಭಾಷೆಗೆ ಸಂಬಂಧಪಟ್ಟ ತಿದ್ದುಪಡಿ ಮಾಡಿದರು. ಜನತೆಯ ಅಭಿಪ್ರಾಯದಂತೆ ಒಂದು ಆಕ್ಟ್ ರೂಪಿಸಿ ಜಾರಿಗೆ ತಂದರು.

ಲ್ಯಾಂಗ್ವೇಜ್ ಆಕ್ಟ್ ಪಾರ್ಲಿಮೆಂಟಿನಲ್ಲಿ ಇಂಟ್ರೊಡ್ಯೂಸ್ ಆದಾಗಲೂ ಉತ್ತರ ಹಿಂದೂಸ್ತಾನದಲ್ಲೂ ವಿದ್ಯಾರ್ಥಿಗಳು ಹಿಂಸಾತ್ಮಕ ಚಟುವಟಿಕೆಗಳನ್ನು ಮಾಡಿದರು, ಲಕ್ಷಗಟ್ಟಲೆ ರೂಪಾಯಿಗಳ ಪಬ್ಲಿಕ್ ಪ್ರಾಪರ್ಟಿ ಹಾಳಾಯಿತು, ಅದಾದ ನಂತರ ಈ ರೆನಲ್ಯೂಷನ್‌ನ್ನು ತಂದರೂ, ಇದರಿಂದ ದಕ್ಷಿಣ ಹಿಂದೂಸ್ತಾನದಲ್ಲಿ ಚಳುವಳಿ ಪ್ರಾರಂಭವಾಯಿತು. ಇದು ಎಷ್ಟು ಅಪಾಯಕಾರಿ ಎಂಬುದನ್ನು ತೋರಿಸಲಿಕ್ಕೆ ನಿದರ್ಶನಗಳನ್ನು ಕೊಡುತ್ತಾ ಇದ್ದೇನೆ. ತಮಿಳು ನಾಡಿನವರು ತಮ್ಮದೇ ಆದಂತಹ ಒಂದು ಫ್ಲಾಗ್‌ನ್ನು ಹಾಯಿಸ್ಟ್ ಮಾಡುತ್ತಾ ಇದ್ದಾರೆ.

(ಶ್ರೀ ವಿಶ್ವನಾಥನ್ಯಾಮಿ)

ಅದನ್ನು ನೋಡಿಕೊಂಡು ಮದ್ರಾಸ್ ಸರ್ಕಾರದವರು ಸುಮ್ಮನೆ ಇದ್ದಾರೆ ಎನ್ನುವುದು ವಿಷಾದನೀಯವಾದ ಸಂಗತಿ. ಕೇರಳದಲ್ಲಿ ಕ್ಯಾಲಿಕಟ್‌ನಲ್ಲಿ ಮುಸ್ಲಿಂರದೇ ಒಂದು ಡಿಸ್ಟ್ರಿಕ್ಟ್ ಪ್ರತ್ಯೇಕವಾಗಿ ಆಗಬೇಕೆಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಎಂದು ಪತ್ರಿಕೆಗಳಲ್ಲಿ ನೋಡಿದೆ. ಈ ತರಹ ಹಿಂಸಾತ್ಮಕ ಚಳುವಳಿಯನ್ನು ಮಾಡಿ ಮುಸ್ಲಿಂರಿಗೆ ಒಂದು ಪ್ರತ್ಯೇಕವಾದ ಡಿಸ್ಟ್ರಿಕ್ಟ್‌ನ್ನು ನಿರ್ಮಾಣ ಮಾಡಿಕೊಡಿ ಎಂದು ಕೇಳತಕ್ಕ ಧೈರ್ಯ ಕೂಡ ಅವರಲ್ಲಿ ಬಂದಿದೆ. ಇದೆಲ್ಲಾ ದೇಶಕ್ಕೆ ಅಪಾಯಕಾರಿ ಇವಕ್ಕೆ ಅವಕಾಶ ಕೊಡಕೂಡದು. ಸರ್ಕಾರದವರು ಒಂದು ನಿರ್ಣಯವನ್ನು ತೆಗೆದುಕೊಂಡಮೇಲೆ ಅದಕ್ಕೆ ಅಂಟಿಕೊಂಡು ಇರಬೇಕಾಗುತ್ತದೆ. ಹಾಗಲ್ಲದೇ ಚಳುವಳಿಗೆ ಒಳಗಾಗಿ ಅದನ್ನು ಬದಲಾವಣೆ ಮಾಡಿದರೆ ದೇಶಕ್ಕೆ ಅಪಾಯಕಾರಿ. ನಾವು ತ್ರಿಭಾಷಾ ಸೂತ್ರ ಇರಬೇಕೆಂದು ಮಾಡಿದ್ದೇವೆ. ಕನ್ನಡ ಭಾಷೆ ಮಾಧ್ಯಮಿಕ ಭಾಷೆ ಆಗಬೇಕೆಂಬುದು ಸರ್ಕಾರದ ನೀತಿ. ಕನ್ನಡ ಭಾಷೆ ಆಡಳಿತಭಾಷೆಯಾಗಬೇಕೆಂದು ಹೇಳುತ್ತಾ ಇದ್ದೇವೆ. ಎಲ್ಲಿಯವರೆಗೆ ಕನ್ನಡವನ್ನು ಆಡಳಿತಭಾಷೆಯನ್ನಾಗಿ ಮಾಡುವುದಿಲ್ಲವೋ ಅಲ್ಲಿಯವರೆಗೂ ಯೂನಿವರ್ಸಿಟಿಯಲ್ಲಿ ಕನ್ನಡ ಮಾಧ್ಯಮ ಭಾಷೆಯಾಗಬೇಕೆಂದು ಹೇಳತಕ್ಕ ಕೂಗು ಸರಿಯಲ್ಲ ಏಕೆಂದರೆ, ಕನ್ನಡದಲ್ಲಿ ಪಾಸ್ ಆದವರು ಯಾರು ಇರುತ್ತಾರೆ ಅವರಿಗೆ ಆಡಳಿತದಲ್ಲಿ ಸರಿಯಾದ ಒಂದು ರೆಪ್ರಸೆಂಟೇಷನ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಒಂದು ಸ್ಥಾನವು ಕೊಡ ಸಿಕ್ಕುವುದಿಲ್ಲ. ಕನ್ನಡ ಆಡಳಿತಭಾಷೆಯಾಗುವವರೆಗೂ ಕನ್ನಡ ಮಾಧ್ಯಮ ವಾಗಬೇಕೆಂದು ಹೇಳುವುದರಲ್ಲಿ ತಥ್ಯವಿಲ್ಲ. ಕನ್ನಡ ಭಾಷೆ ಆಡಳಿತ ಭಾಷೆಯಾಗಿದೆ ಎಂದು ಹೇಳುತ್ತಾರೆ, ಆ ರೀತಿ ಮಾಡಲು ಎಷ್ಟುಮಟ್ಟಿಗೆ ಕ್ರಮ ತೆಗೆದುಕೊಂಡಿದ್ದಾರೆ ಎಂದು ಕೇಳುತ್ತೇನೆ. ನಾವು ಹೈದರಾಬಾದ್ ಕರ್ನಾಟಕದಿಂದ ಬಂದವರಿಗೆ ಚೆನ್ನಾಗಿ ಗೊತ್ತಿದೆ, ಹೈದ್ರಾಬಾದ್ ಸರ್ಕಾರದವರು ಉರ್ದುಭಾಷೆಯನ್ನು ರಾಜ್ಯಭಾಷೆಯನ್ನಾಗಿ ಮಾಡಬೇಕೆಂದು ನಿರ್ಣಯ ಮಾಡಿದ ಮೇಲೆ ವಿಶ್ವವಿದ್ಯಾನಿಲಯದಲ್ಲಿ ಪೋಸ್ಟ್‌ಗ್ರ್ಯಾಜ್ಯುಯೇಷನ್ ಕೋರ್ಸ್ ಪ್ರಾರಂಭ ಮಾಡಿದರು, ಎಂ. ಎ., ಎಕನಾಮಿಕ್ಸ್, ಪಾಲಿಟಿಕ್ಸ್, ಪ್ರತಿಯೊಂದೂ ಕೊಡ ಉರ್ದುಭಾಷೆಯಲ್ಲಿ ಆಗುತ್ತಾ ಇತ್ತು. ಹೈಕೋರ್ಟ್ ರ್ಯಾಂಗ್ಲೇಜ್ ಕೂಡ ಉರ್ದುಭಾಷೆಯಲ್ಲಿಯೇ ಇತ್ತು. ರಾ ರಿಪೋರ್ಟ್ಸ್ ಕೂಡ ಉರ್ದು ಭಾಷೆಯಲ್ಲಿ ಬರತ್ತಾ ಇತ್ತು. ಇದಕ್ಕೆ ಕಾರಣ ಉರ್ದುಭಾಷೆ ರಾಜ್ಯಭಾಷೆಯಾಗಬೇಕೆಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದರಿಂದ ಸಾಧ್ಯವಾಯಿತೇ ಹೊರತು ಇಲ್ಲದೇ ಇದ್ದಿದ್ದರೆ ಆಗುತ್ತಾ ಇರಲಿಲ್ಲ. ಆದ್ದರಿಂದ ಸರ್ಕಾರದವರು ಸುಮ್ಮನೆ ಅಶ್ವಾಸನೆಗಳನ್ನು ಕೊಡುವುದಕ್ಕಿಂತ ಕನ್ನಡವನ್ನು ಮೊದಲು ಆಡಳಿತ ಭಾಷೆಯನ್ನಾಗಿ ಮಾಡಿ ನಂತರ ಯೂನಿವರ್ಸಿಟಿಯಲ್ಲಿ ಕನ್ನಡ ಮಾಧ್ಯಮ ಮಾಡಿದರೆ ಮಾತ್ರ ಕನ್ನಡ ಪಾಪ್ಯುಲರ್ ಆಗಬಹುದು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯೂ ಕೂಡ ಅದನ್ನು ಕಲಯಲಕ್ಕೆ ಮುಂದೆ ಬರ ಬಹುದು ಎಂದು ಹೇಳುತ್ತಾ ಇದ್ದೇನೆ. ತ್ರಿಭಾಷಾ ಸೂತ್ರದ ವಿಷಯದಲ್ಲಿ, ಹೇಳುವುದಾದರೆ ನಾವು ಹಿಂದಿಯನ್ನು ಒಪ್ಪಕೊಂಡಿದ್ದೇವೆ. ಹಿಂದಿ ನಮ್ಮ ರಾಷ್ಟ್ರಭಾಷೆ. ಒಂದು ಲಿಂಕ್ ರ್ಯಾಂಗ್ವೇಜ್ ಬೇಕು ಎಂದು ಅದನ್ನು ಒಪ್ಪಿಕೊಂಡಿದ್ದೇವೆ. ಅದನ್ನು ಡಿಸ್ಪ್ಯೂಟ್‌ಮಾಡತಕ್ಕ ಪ್ರಮೇಯವೇ ಇಲ್ಲ. ಆದರೆ ಈಗ ನಡೆಯುತ್ತಾ ಇರತಕ್ಕ ಚಳುವಳಿನೋಡಿದರೆ ಹಿಂದಿ ಭಾಷೆ ನಮಗೆ ಬೇಡವೇಬೇಡ ಅನ್ನುವ ರೀತಿಯಲ್ಲಿ ನಡೆಯುತ್ತಾ ಇದೆ. ಹಿಂದಿ ಲಿಂಕ್‌ಲ್ಯಾಂಗ್ವೇಜ್ ಆಗಲಕ್ಕೆ ಅದರಲ್ಲಿ ಏನು ಸ್ಪೆಷ್ಯಾಲಿಟಿ ಇದೆ, ? ತಮಿಳು ಹಿಂದಿಗಿಂತ ಹಳೇ ಭಾಷೆ ಆದಕಾರಣ ಅದು ಲಿಂಕ್ ರ್ಯಾಂಗ್ವೇಜ್ ಆಗಲಕ್ಕೆ ಯೋಗ್ಯವಾಗಿದೆ ಎಂದು ಅಣ್ಣಾದೊರೈರವರು ಹೇಳುತ್ತಾ ಇದ್ದಾರೆ ಅದಕ್ಕೆ ನಾನು ಉತ್ತರ ರೂಪವಾಗಿ ಹೇಳುವುದು ಇಷ್ಟೆ, ತಮಿಳಿಗಿಂತಲೂ ಪುರಾತನವಾದ ಭಾಷೆ ಸಂಸ್ಕೃತ ಇದೆ, ಅದನ್ನು ಏಕೆ ಒಪ್ಪಿಕೊಳ್ಳಬಾರದು ? ನಾವು ಅದನ್ನು ಒಪ್ಪಿಕೊಂಡ ಉದ್ದೇಶ, ಉತ್ತರ ಹಿಂದೂಸ್ಥಾನದವರ ಭಾಷೆ ಅದು ಅಂತ ಅಲ್ಲ, ಆಥವಾ ಅದರಲ್ಲಿ ಏನೊ, ಒಂದು ವಿಶಿಷ್ಟವಾದ ಗುಣ ಇದೆ ಅಂತ ಅಲ್ಲ, ಆದರೆ ಹೆಚ್ಚು ಜನರು ಹಿಂದಿಯನ್ನು ಬಳಸುತ್ತಾರೆ ಹೆಚ್ಚು ಜನರು ಹಿಂದಿಯನ್ನು ಓದಬಲ್ಲರು, ಮಾತನಾಡಬಲ್ಲರು, ತಿಳಿಯಬಲ್ಲರು ಎಂಬ ಉದ್ದೇಶದಿಂದ ಅದು ಲಿಂಕ್‌ಲ್ಯಾಂಗ್ವೇಜ್ ಆಗಿರಲಿ ಎಂದು ಒಪ್ಪಿಕೊಂಡೆವು, ಇದರಲ್ಲಿ ತಾರತಮ್ಯ ಬರಕೂಡದು. ದಕ್ಷಿಣ ಹಿಂದೂಸ್ಥಾನದವರ ಮೇಲೆ ಹಿಂದಿಯನ್ನು ಹೇರಬೇಕೆಂಬ ಉದ್ದೇಶದಿಂದ ಮಾಡುತ್ತಾ ಇದ್ದಾರೆ ಎಂದು ಈಗ ಚಳುವಳಿ ಪ್ರಾರಂಭವಾಗಿದೆ. ಮೊದಲು ನಮ್ಮ ಹುಡುಗರು ಹಿಂದಿಯನ್ನು ಕಲಯುತ್ತಾ ಇರಲ್ಲವೇ ? ದಕ್ಷಿಣ ಭಾರತ ಹಿಂದೀ ಪರೀಕ್ಷೆಗೆ ಈಗಲೂ ಕೂಡ 35 ಸಾವಿರ ಹುಡುಗರು ಪರೀಕ್ಷೆಗೆ ಕುಳಿತಿದ್ದಾರೆ ಎಂದರೆ ಇದರ ಅರ್ಥವೇನು ! ಇದು ಹಿಂದಿಗೆ ವಿರೋಧವಾಗಿದೆಯ ! ಸಾವಿರಾರು ಜನ ವಿದ್ಯಾರ್ಥಿಗಳು ಹಿಂದಿಯಲ್ಲಿ ಪಾಸ್ ಆಗುತ್ತಾ

ಇದ್ದಾರೆ, ಹಿಂದಿ ಕಲಿಯುತ್ತಾ ಇದ್ದಾರೆ, ಹಿಂದಿಗೆ ಎಂದೆಂದೂ ವಿರೋಧ ಇಲ್ಲ. ಆದರೆ ಪಾರ್ಲಿಮೆಂಟಿನಲ್ಲಿ ರೆಸಲ್ಯೂಷನ್ ಮುಂಡಿಸಿದ ಮೇಲೆ ಅದಕ್ಕೆ ವಿರೋಧ ಪ್ರಾರಂಭವಾಯಿತು. ಆ ರೆಸಲ್ಯೂಷನ್‌ನ ಇಫೆಕ್ಟನ್ನು ನಲ್ಲಿಫೈ ಮಾಡಬೇಕೆಂದು ಸರ್ಕಾರದವರು ಕೆಲವು ಕ್ರಮಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲೂ ನಿರ್ಣಯ ತೆಗೆದುಕೊಂಡಿದ್ದಾರೆ. Three language formula ಸೆಂಟ್ರರ್ ಸರ್ವೀಸಸ್‌ನಲ್ಲೂ ಕೂಡ ಅನ್ವಯ ಮಾಡಬೇಕೆಂದು ಯೋಚನೆ ಮಾಡುತ್ತಾ ಇದ್ದಾರೆ ಎಂದು ಪತ್ರಿಕೆಯಲ್ಲಿ ನೋಡಿದೆ. ಆ ರೀತಿ ಆದರೆ ಮಾತ್ರ ಈ ವಿರೋಧ ಕಡಿಮೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ.

ರಾ ಅಂಡ್ ಆರ್ಡರ್ ಸಿಚ್ಯುಯೇಷನ್‌ಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಮಾತನಾಡಿದ್ದನ್ನು ಕೇಳಿದರೆ ಭಾಷಾ ಪ್ರಶ್ನೆಗೆ ಸಂಬಂಧಿಸಿದಂತೆ ಅದು ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಿಗೆ ಮಾತ್ರ ಸೀಮಿತವಾಗಿತ್ತು ಅನ್ನುವ ರೀತಿಯಲ್ಲಿ ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ರಾ ಅಂಡ್ ಆರ್ಡರ್ ಪರಿಸ್ಥಿತಿ ಎಷ್ಟು ಉತ್ತಮವಾಗಿದೆ ಎಂದು ತಿಳಿದುಕೊಂಡಿದ್ದೇವೆಯೋ ಅಷ್ಟು ಉತ್ತಮವಾಗಿದೆಯೇ ಎಂಬುದನ್ನು ನೋಡೋಣ. ಗ್ರಾಮಗಳಲ್ಲಿ ಇವತ್ತು ಕ್ರೈಮ್ಸ್ ಹೆಚ್ಚಾಗುತ್ತಾ ಇದೆ. ರೇಪು, ಅರ್ಸನ್, ಲೂಟಿ, ರಾಬರಿ ಮತ್ತು ಮರ್ಡರ್ಸ್ ಇವುಗಳ ಸಂಖ್ಯೆ ಇವತ್ತು ಗ್ರಾಮಾಂತರಗಳಲ್ಲಿ ಹೆಚ್ಚಾಗುತ್ತಾ ಇದೆ. ಇದಕ್ಕೆ ಕಾರಣ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಕ್ರಮತೆಗೆದುಕೊಳ್ಳದೆ ಇರುವುದೇ ಆಗಿದೆ. ಇವತ್ತು ಹೇಳುತ್ತೇನೆ, ರಾಯಚೂರು ಜಿಲ್ಲೆಯಲ್ಲಿ ಒಂದರಲ್ಲೇ ಅಲ್ಲ ಪ್ರತಿಯೊಂದು ಜಿಲ್ಲೆಯಲ್ಲೂ ಸಹ ಇದೇ ಪರಿಸ್ಥಿತಿ ಇದೆ. ಯಾರಾದರೂ ಒಬ್ಬನು ಮರ್ಡರ್ ಚಾರ್ಜಿನಿಂದ ವಿಮುಕ್ತನಾಗಬಲ್ಲ. ಅದಕ್ಕೆ ಕಾರಣ ಇನ್‌ವೆಸ್ಟಿಗೇಷನ್ ಸರಿಯಾಗಿ ನಡೆಯುತ್ತಿಲ್ಲ. ಅದನ್ನು ಕ್ರಮಗೊಳಿಸುವುದಕ್ಕೆ ಸರ್ಕಾರ ಸರಿಯಾದ ಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಹೀಗಾದರೆ ದೇಶದಲ್ಲಿ ಇನ್ನೆಲ್ಲಿಂದ ಬರಬೇಕು ರಾ ಅಂಡ್ ಆರ್ಡರ್? ಇದಕ್ಕೆ ನಿದರ್ಶನವಾಗಿ ಹೇಳಬೇಕೆಂದರೆ ನನ್ನ ತಾಲ್ಲೂಕಿನಲ್ಲೇ ಆರೇಳು ಮರ್ಡರ್ ಕೇಸುಗಳು ನಡೆದವು. ಅವುಗಳನ್ನೆಲ್ಲಾ ಆಕ್ಸಿಡೆಂಟರ್ ಡೆತ್ಸ್ ಎಂದು ಹೇಳಿಬಿಟ್ಟರು. ಹೀಗಾಗುತ್ತಿರುವಾಗ ಇನ್ನು ದೇಶದಲ್ಲಿ ರಾ ಅಂಡ್ ಆರ್ಡರ್ ಬರಬೇಕೆಂದರೆ ಎಲ್ಲಿಂದ ಬರುತ್ತದೆ! ಅದರಲ್ಲೂ ಈ ದಿವಸ ಹಳ್ಳಿಗಳಲ್ಲಂತೂ ಇದರ ವಾಸನೆ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಬರ್ಗ್ಲರಿ ಮತ್ತು ಮನೆ ನುಗ್ಗಿ ಮಾಡತಕ್ಕ ಕಳ್ಳತನಗಳು ವಿಶೇಷವಾಗಿ ನಡೆಯುತ್ತಿವೆ. ಇಂಥ ತಕ್ಸೀರುಗಳಲ್ಲಿ ಪೋಲೀಸಿನವರು ಎಷ್ಟು ಕೇಸುಗಳಲ್ಲಿ ಕನ್‌ವಿಕ್ಷನ್ ಕೊಡಿಸಿದ್ದಾರೆ? ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಈ ರಾ ಅಂಡ್ ಆರ್ಡರ್ ಎಂಬುದು ಇಲ್ಲವೇ ಇಲ್ಲವೆಂದು ಹೇಳಬಹುದು.

Mr. CHAIRMAN.—How much more time does the Hon'ble Member require ?

Sri VISWANATHA SWAMY.—Fifteen minutes more Sir.

Mr. CHAIRMAN.—The House stands adjourned to 2-15 P.M. tommorrow.

———

The House adjourned at Six of the Clock to meet again at Fifteen Minutes past Two of the Clock on Wednesday, 28th February 1968.

———

WD 10325—GPB—600—20-7-68